


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 52 Wednesday 30-10-2024 E-mail : maruti.b.hosamani76@gmail.com Page: 4 Price : Rs. 1/-


## ಶೋಷಿತ ಸಮಾಜ ಮುಖ್ಯ ವಾಹಿನಿಗೆ ಬರಬೇಕು: ಎಂ.ವಿ ಭವಾನಿ



**ಸಿಹಿ ಕಹಿ ಸುದ್ದಿ,**
**ಶೃಂಗೇರಿ :** ಸಂಘಟನೆ ಮುಖಾಂತರ ಸರ್ಕಾರದ ಸವಲತ್ತುಗಳನ್ನು ಪಡೆದು ಆರ್ಥಿಕ ಅಭಿವೃದ್ಧಿ ಹೊಂದಬೇಕು ಎಂದು ಕರ್ನಾಟಕ ದಲಿತ ಮಹಿಳಾ ಒಕ್ಕೂಟದ ರಾಜ್ಯ ಸಂಘಟನಾ ಸಂಚಾಲಕಿಯಾದ ಎಂ.ವಿ ಭವಾನಿ ರವರು ಹೇಳಿದರು. ಅವರು ಇಂದು ಶೃಂಗೇರಿ ತಾಲೂಕು ಕಲ್ಲುಕಟ್ಟೆ ಗ್ರಾಮದಲ್ಲಿ ಏರ್ಪಡಿಸಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಹಾತ್ಮ ಪ್ರೊ.ಬಿ ಕೃಷ್ಣಪ್ಪ ಸ್ಥಾಪಿತ ರಿ,ನಂ, 386 / 2020-21 ಸಂಘಟನೆ ನೂತನ ಗ್ರಾಮ ಶಾಖೆ ರಚನಾ ಸಭೆಯಲ್ಲಿ ಮಾತನಾಡಿದರು. ಶೋಷಿತರು ಸಮಾಜದ ಮುಖ್ಯ ವಾಹಿನಿಗೆ ಬರಬೇಕು ಸ್ವಾಭಿಮಾನದ ಜೀವನ ನಡೆಸಬೇಕು ಅದ-ಕ್ಕೆ ಪೂರಕವಾಗಿ ಸಂಘಟನೆ ಸಹಕಾರ ಮಾರ್ಗದರ್ಶನ ನೀಡುತ್ತದೆ ಎಲ್ಲರೂ ಸಂಘಟಿ-ತರಾಗ ಬೇಕು ಎಂದು ಕರೆ ಕೊಟ್ಟರು, ಇದೇ ಸಂದರ್ಭದಲ್ಲಿ ಕಲ್ಲುಕಟ್ಟೆ ಗ್ರಾಮ ಶಾಖೆಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿದರು. ಗ್ರಾಮ ಶಾಖೆ ಸಂಚಾಲಕರಾಗಿ ಶಾಂತೇಶ್ (ನಾಗೇಶ್) ಸಂಘಟನಾ ಸಂಚಾಲಕರಾಗಿ ನವೀನ್ ವಿ, ಅಣ್ಣಪ್ಪ ಜೆ, ಖಜಾಂಚಿಯಾಗಿ ಪ್ರಕಾಶ್ ರವರನ್ನು ಆಯ್ಕೆ ಮಾಡಿ ನಂತರ ಕರ್ನಾಟಕ ದಲಿತ ಮಹಿಳಾ ಒಕ್ಕೂಟದ ಗ್ರಾಮ ಶಾಖೆ ಸಂಚಾಲಕಿಯಾಗಿ ರತ್ನಮ್ಮ ಸಂಘಟನಾ ಸಂಚಾಲಕರಾಗಿ ಲಕ್ಷ್ಮಿ ದೇವಿ, ಉಷಾ, ರೀತ ಹಾಗೂ ಖಜಾಂಚಿಯಾಗಿ ಧನಲಕ್ಷ್ಮಿ ರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್. ತರೀಕೆರೆ.ಚಿಕ್ಕಮಗಳೂರು**

# ಸರ್ಕಾರಿ ನೌಕರರ ಸಂಘದ ಚುನಾವಣೆ, 22 ಅವಿರೋಧ, 10. ಸ್ಥಾನಕ್ಕೆ ಚುನಾವಣೆಯ ಸುಸೂತ್ರ - ಸ್ವಾಭಿಮಾನಿ ಶಿಕ್ಷಕರ ಬಳಗಕ್ಕೆ ಗೆಲುವಿನ ನಗೆ

**ಕೂಡ್ಲಿಗಿ :** ತಾಲೂಕಿನ ಸರ್ಕಾರಿ ನೌಕರರ ಸಂಘದನೂತನಸದಸ್ಯರಆಯ್ಕೆಕುರಿತಾಗಿ ಒಟ್ಟು32ಸ್ಥಾನಗಳಿದ್ದುಅದರಲ್ಲಿ22ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದು. ಉಳಿದಂತೆ 10 ಸ್ಥಾನಗಳಾದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಐದು, ಆರೋಗ್ಯ,ಬಿಸಿಎಂಹಾಸ್ಟೆಲ್,ಪಾಲಿಟೆಕ್ನಿಕ್ ಕಾಲೇಜ್ ನವರ ಆಯ್ಕೆಯಲ್ಲಿ ಬಿರುಸಿನ ಚಟುವಟಿಕೆಯಲ್ಲಿ ನಿನ್ನೆ ಪಟ್ಟಣದ ಸರಕಾರಿ ಜೂನಿಯರ್ ಕಾಲೇಜಿನ ಪ್ರೌಢಶಾಲೆ ವಿಭಾಗದಲ್ಲಿ ಸರಕಾರಿ ನೌಕರರ ಸಂಘದ ತಾಲೂಕ ಘಟಕದ ಪದಾಧಿಕಾರಿಗಳಿಗೆ 10 ಸ್ಥಾನಗಳಿಗೆ ಸೋಮವಾರ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ಸುಸೂತ್ರವಾಗಿ ನಡೆಸಲಾಗಿ ಸಂಜೆ 5 ರ ನಂತರ ಮತ ಎಣಿಕೆಯಲ್ಲಿ ಜಿದ್ದಾ ಜಿದ್ದಿಯಿದ್ದ ಐದು ಸ್ಥಾನದ ಪ್ರಾಥಮಿಕ ಶಾಲಾ ಶಿಕ್ಷಕರ ಸ್ವಾಭಿಮಾನಿ ಬಳಗ ಐದು ಸ್ಥಾನ ತಮ್ಮದಾಗಿಸಿ ಕೊಂಡು ಗೆಲುವಿನ ನಗೆ ಬೀರಿತು.

ತಾಲೂಕಾಸಂಘಕ್ಕೆಒಟ್ಟು32ಸ್ಥಾನಗಳಿದ್ದು, ಆ ಪೈಕಿ 22 ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿತ್ತು. ಇದೀಗ, ಪ್ರಾಥಮಿಕ ಶಾಲೆ- 5 ಪ್ರೌಢಶಾಲೆ -2 ಹಾಗೂ ಆರೋಗ್ಯ ಇಲಾಖೆ, ಬಿಸಿಎಂ ಹಾಸ್ಟೆಲ್ ಹಾಗೂ ಡಿಪ್ಲೊಮಾ ಕಾಲೇಜ್ ತಲಾ 1 ಸ್ಥಾನ ಸೇರಿ 10 ಸ್ಥಾನಗಳಿಗೆ ಮತದಾನ ನಡೆಯಿತು. ಪ್ರಾಥಮಿಕಶಾಲೆ ಶಿಕ್ಷಕರಿಗೆ 2 ಕೊಠಡಿಗಳಲ್ಲಿ ಮತದಾನ ಪ್ರಕ್ರಿಯೆ ನಡೆದರೆ ಪ್ರೌಢ, ಆರೋಗ್ಯ, ಬಿಸಿಎಂ ಹಾಸ್ಟೆಲ್ ಹಾಗೂ ಪಾಲಿಟೆಕ್ನಿಕ್ ಕಾಲೇಜಿನ ಸ್ಥಾನಗಳಿಗೆ ತಲಾ 1 ಕೊಠಡಿಯಲ್ಲಿ ಮತದಾನಕ್ಕೆ ವ್ಯವಸ್ಥೆ





ಮಾಡಲಾಗಿತ್ತು. ಪ್ರಾಥಮಿಕ ಶಾಲೆಗೆ ಸಂಬಂಧಿಸಿದ ಒಟ್ಟು 779 ಮತದಾರರು ಇರುವುದರಿಂದ ಮತಕೇಂದ್ರಗಳ ಬಳಿ ಸರದಿಸಾಲಿನಲ್ಲಿನಿಂತುಮತದಾರರುಹಕ್ಕು ಚಲಾಯಿಸಿದರು. ಪ್ರಾಥಮಿಕ ಶಾಲೆಯ 5 ಸ್ಥಾನಗಳಿಗೆ 10 ಅಭ್ಯರ್ಥಿಗಳು, ಪ್ರೌಢ ಶಾಲೆಯ 2 ಸ್ಥಾನಕ್ಕೆ 4 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಅದರಂತೆ, ಆರೋಗ್ಯ, ಬಿಸಿಎಂ ಹಾಸ್ಟೆಲ್ ಹಾಗೂ ಪಾಲಿಟೆಕ್ನಿಕ್ ಕಾಲೇಜು ತಲಾ 1 ಸ್ಥಾನಕ್ಕೆ ತಲಾ ಇಬ್ಬರು ಅಭ್ಯರ್ಥಿಗಳು ಕಣದಲ್ಲಿದ್ದರು. ಐದು ಕೊಠಡಿಗಳಲ್ಲೂ ಪ್ರತ್ಯೇಕವಾಗಿ ಪಿಆರ್‌ಒ, ಎಪಿಆರ್‌ಒ ಸೇರಿ ಸಿಬ್ಬಂದಿ ಚುನಾವಣಾ ಕರ್ತವ್ಯ ನಿರ್ವಹಿಸಿದರು.

1133 ಮತ ಚಲಾವಣೆ: ಸರಕಾರಿ ನೌಕರರ ಸಂಘದ ತಾಲೂಕು ಘಟಕಕ್ಕೆ ಪ್ರಾಥಮಿಕ ಶಾಲೆಯ 798 ಮತಗಳ ಪೈಕಿ 771 ಚಲಾವಣೆಯಾಗಿವೆ. ಅದರಂತೆ, ಪ್ರೌಢ ಶಾಲೆಯ 176 ರಲ್ಲಿ 166, ಆರೋಗ್ಯ ಇಲಾಖೆಯ 142 ರ ಪೈಕಿ 124, ಬಿಸಿಎಂ ಹಾಸ್ಟೆಲ್ 50 ರ ಪೈಕಿ 45 ಹಾಗೂ ಪಾಲಿಟೆಕ್ನಿಕ್ ಕಾಲೇಜಿನ 30 ಮತದಾರರ ಪೈಕಿ 27 ನೌಕರರು ಸೇರಿ ಒಟ್ಟು 1133 ಹಕ್ಕು ಚಲಾವಣೆಯಾಗಿವೆ ಎಂದು ಚುನಾವಣಾಧಿಕಾರಿ ಹಾಗೂ ಬಿಸಿಯೂಟ ಸಹಾಯಕನಿರ್ದೇಶಕಕೆ.ಜಿ.ಆಂಜನೇಯ, ಸಹಾಯಕಚುನಾವಣಾಧಿಕಾರಿಕೆ.ಗೂಳೆಪ್ಪ ತಿಳಿಸಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರಸಂಘದ2024-2029ರವರೆಗಿನ ಕೂಡ್ಲಿಗಿತಾಲೂಕು32ನಿರ್ದೇಶಕರಸ್ಥಾನಕ್ಕೆ 22 ಮಂದಿ ಅವಿರೋಧ ಆಯ್ಕೆಯಾದಂತೆ ಹೆಸರುಗಳು ಇಂತಿವೆ.

ಹಾಜೀ ಮಲ್ಲಂಗ (ಕೃಷಿ ಇಲಾಖೆ),ಯು ನೈನಪ್ಪ (ಪಶುಪಾಲನೆ ಇಲಾಖೆ), ಸವಿತಾ .(ಕಂದಾಯ ಇಲಾಖೆ), ತಳವಾರ್ ಪ್ರಭು. (ಕಂದಾಯ ಇಲಾಖೆ), ಹೈದರ್ (ಲೋಕೋಪಯೋಗಿ ಇಲಾಖೆ), ನಾಗರಾಜ್ (ಗ್ರಾಮೀಣ ಕುಡಿಯು ನೀರು ಇಲಾಖೆ),ಮಹೇಂದ್ರಕುಮಾರ್(ಬೋಧ-ಕೇತರ ಸಿಬ್ಬಂದಿ), ನಾಗರಾಜ್ (ಪಿಯು ಕಾಲೇಜು ವಿಭಾಗ), ಶ್ರೀಕಾಂತ್ (ಸಮಾಜ ಕಲ್ಯಾಣ ಇಲಾಖೆ), ಕುಬೇರ ಕೆ.ಬಿ. (ಅರಣ್ಯ ಇಲಾಖೆ), ನಾಗೇಶಯ್ಯ (ಆರೋಗ್ಯ ಇಲಾಖೆ), ಎಂ ಆರ್ ಬಸವರಾಜ್. (ಆರೋಗ್ಯ ಇಲಾಖೆ), ಭಾರತಿ (ಆರೋಗ್ಯ ಇಲಾಖೆ), ನರೇಶ್ ಎಂ ( ರೇಷ್ಮೆ ಇಲಾಖೆ), ಶ್ರೀನಿವಾಸ (ಉಪ ಖಜಾನೆ), ನಾಗರಾಜ್ ಹೆಚ್ (ಭೂ ಮಾಪನ ಇಲಾಖೆ), ಮಂಗಳ (ನ್ಯಾಯಾಂಗ ಇಲಾಖೆ), ವೆಂಕಟೇಶ (ತಾಲೂಕು ಪಂಚಾಯಿತಿ), ರಾಮ ಕೃಷ್ಣ (ತಾಲೂಕು ಪಂಚಾಯಿತಿ), ಅನುಪಮ ( ಶಿಶು ಅಭಿವೃದ್ಧಿ ಇಲಾಖೆ ), ವಾಣಿ ಶ್ರೀ (ಆಹಾರ ನಾಗರಿಕ ಇಲಾಖೆ) ಹಾಗೂ ಟಿ ನಾಗರಾಜ್ (ಅಬಕಾರಿ ಇಲಾಖೆ)ಇವರುಗಳು ಅವಿರೋಧ ಆಯ್ಕೆಯಾಗಿದ್ದಾರೆ.ಉಳಿದಂತೆ ಇನ್ನುಳಿದ 10ಸ್ಥಾನಗಳಿಗೆಸೋಮವಾರಬೆಳಿಗ್ಗೆಯಿಂದ ಸಂಜೆವರೆಗೆನಡೆದ ಚುನಾವಣೆಮತದಾನ ಪ್ರಕ್ರಿಯೆ ಪೊಲೀಸ್ ಬಿಗಿ ಬಂದೋಬಸ್ತ್ ನಲ್ಲಿ ಮುಗಿದ ನಂತರ ಸಂಜೆ 5 ಗಂಟೆ ನಂತರ ಬ್ಯಾಲೆಟ್ ಮತ ಎಣಿಕೆ ಕಾರ್ಯ ನಡೆಸಲಾಗಿ ನಿನ್ನೆರಾತ್ರಿ 11 ಗಂಟೆ ಸಮಯಕ್ಕೆ 10 ಸ್ಥಾನಗಳ 20 ಅಭ್ಯರ್ಥಿಗಳ ಹಣೆಬರಹ ಹೊರಬೀಳುತ್ತಿದ್ದಂತೆಸ್ವಾಭಿಮಾನಿಶಿಕ್ಷಕರ ಬಳಗದ ತಂಡ ಹೆಚ್ಚಿನ ಗೆಲುವಿನ ನಗೆ ಬೀರಿದೆ.ಪ್ರೌಢಶಾಲೆಯವಿಭಾಗದ ಎರಡು ಸ್ಥಾನಕ್ಕೆಶಿವಾನಂದಸ್ವಾಮಿ ಕೆ.ಪಿ.ಎಂ ಮತ್ತು ಮುತ್ತುರಾಜ್ ಎಂ.ಎಸ್ ಗೆಲುವು ಪಡೆದರೆ ತೀರಾ ಜಿದ್ದಾ ಜಿದ್ದಿಯಾಗಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ವಿಭಾಗದ ಐದು ಸ್ಥಾನಕ್ಕೆ ಆರ್.ಬಿ ಬಸವರಾಜ್.ಎಂ.ಮಂಜುನಾಥ. ಪಾಂಡುರಂಗ.ದೊಡ್ಡಪ್ಪಹಾಗೂಪ್ರವೀಣ್ ಸ್ವಾಭಿಮಾನಿಶಿಕ್ಷಕರಬಳಗಐದಕ್ಕೆಐದುಸ್ಥಾನ ಪಡೆದು ಗೆಲುವಿನ ನಗೆ ಬೀರಿದರು. ಅದೇ ರೀತಿಯಾಗಿ ಆರೋಗ್ಯ ಇಲಾಖೆಯಿಂದ ಶರಣೇಶ, ಬಿಸಿಎಂ ಹಾಸ್ಟೆಲ್ ನಿಂದ ಕುಮಾರಸ್ವಾಮಿ. ಡಿಪ್ಲೊಮ ಕಾಲೇಜ್ ನಿಂದ ರಾಘವೇಂದ್ರ ಗೆಲುವು ಸಾಧಿಸಿ ಈ ಬಾರಿ ಚುನಾವಣೆಯಲ್ಲಿ ಸರ್ಕಾರಿ ನೌಕರರ ಸಂಘದ ಸದಸ್ಯರಾಗಿದ್ದಾರೆ. ಎಂದು ಶಿವರಾಜ್ ಅಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಳೆದ ಸಾಲಿನ ಅಧ್ಯಕ್ಷ ಪಿ.ಶಿವರಾಜ್ ಪತ್ರಿಕಾ ಪ್ರಕಟಣೆಗೆ ತಿಳಿಸಿದರು.

**ಶಿಕ್ಷಣ ಕ್ಷೇತ್ರದಲ್ಲಿ ತೀವ್ರ ಪೈಪೋಟಿ: ಕೂಡ್ಲಿಗಿ ತಾಲೂಕಿನ ಸರಕಾರಿ ನೌಕರರ ಸಂಘದ ಚುನಾವಣೆ ಹಿನ್ನೆಲೆ ಪ್ರಾಥಮಿಕ ಶಾಲೆಯ ಶಿಕ್ಷಕರ 5 ಸ್ಥಾನಗಳಿಗೆ ತೀವ್ರಸ್ಪರ್ಧೆ ಏರ್ಪಟ್ಟಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಎರಡು ಗುಂಪಿನಲ್ಲಿ ಶಿಕ್ಷಕರ ತಮ್ಮ ಪರವಾದ ಟೀಮ್ ಬೆಂಬಲಿಸುತ್ತಿದ್ದರು. ಅದರಂತೆ, ಕೇವಲ 30 ಮತದಾರರಿರುವ ಪಾಲಿಟೆಕ್ನಿಕ್ ಕಾಲೇಜಿನ 1 ಸ್ಥಾನಕ್ಕೆ ಇಬ್ಬರು ಸ್ಪರ್ಧಿಸಿರುವುದು ಎಲ್ಲರ ಕುತೂಹಲ ಮೂಡಿಸಿತು. ತಾಲೂಕಿನ ಕಾನಾ ಹೊಸಹಳ್ಳಿ, ಗುಡೇಕೋಟೆ ಸೇರಿ ನಾನಾ ಭಾಗದಿಂದ ಸರಕಾರಿ ನೌಕರರು, ಶಿಕ್ಷಕರು ಗುಂಪು ಗುಂಪಾಗಿ, ಟ್ರಾಕ್ಸ್, ಬೈಕ್ ಹಾಗೂ ಕಾರು ಸೇರಿ ನಾನಾ ವಾಹನಗಳಲ್ಲಿ ಆಗಮಿಸಿ ತಮ್ಮ ಮತದಾನದ ಹಕ್ಕು ಚಲಾಯಿಸಿದರು.**

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ. ಬಿ.ಸಾಲುಮನೆ. ಕೂಡ್ಲಿಗಿ.ವಿಜಯನಗರ**

# ಕನ್ನಡ ರಾಜ್ಯೋತ್ಸವ ಹಬ್ಬದ ನಿಮಿತ್ಯವಾಗಿ ಕನ್ನಡ ಬಾವುಟಗಳು ವಿತರಣಾ ಕಾರ್ಯಕ್ರಮ

**ಸಿಹಿ ಕಹಿ ಸುದ್ದಿ**
**ನರೇಗಲ್ :** ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ನರೇಗಲ್ ಪಟ್ಟಣ ಪಂಚಾಯತ್ ಸಭಾ ಭವನದಲ್ಲಿ ಇಂದು ನವೆಂಬರ್ 1 ರ ಕನ್ನಡ ನಾಡಿನ ಜನತೆಗೆ ನಾಡ ಹಬ್ಬವಾಗಿ ಸಂಭ್ರಮ ಪಡತಕ್ಕಂತಹ ಈ ರಾಜ್ಯೋತ್ಸವದ ಅಂಗವಾಗಿ ಪೂರ್ವಭಾವಿ ಸಭೆ ಜರುಗಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಪ.ಪಂ ಅಧ್ಯಕ್ಷ ಪಕೀರಪ್ಪ ಮಳ್ಳಿ ಬಾವುಟಗಳನ್ನು ಕನ್ನಡ ಅಭಿಮಾನಿಗಳಿಗೆ ಬಾವುಟಗಳನ್ನು ನೀಡುವುದರ ಮೂಲಕ ಬಿಡುಗಡೆ ಗೊಳಿಸಿ ಮಾತನಾಡಿ ಕನ್ನಡ ನಾಡು ನುಡಿ ಹಬ್ಬವಾದ ಕನ್ನಡ ರಾಜ್ಯೋತ್ಸವವನ್ನು ಅರ್ಥವತ್ತಾಗಿ ಆಚರಿಸುವದು ನಮ್ಮೆಲ್ಲರ ಹಿರಿಮೆ ಎಂದು ಹೇಳಿದರು. ಈ ವರ್ಷ ವಿಶೇಷವಾಗಿ ನರೇಗಲ್ ಪಟ್ಟಣ ಪಂಚಾಯತ್ ವತಿಯಿಂದ ಒಟ್ಟು ಸಾವಿರ ಕನ್ನಡ ಬಾವುಟಗಳನ್ನು ಪ.ಪಂ ಸದಸ್ಯರ ನೇತೃತ್ವದಲ್ಲಿ ಮನೆ ಮನೆಗಳ ಮೇಲೆ ಹಾರಿಸುವುದಾಗಿ ಹೇಳಿದರು. ಸಭೆಯಲ್ಲಿ ನಿವೃತ್ತ ಶಿಕ್ಷಕರಾದ ಎಂ.ಎಸ್ ದಡೆಸೂರಮಠ ಕನ್ನಡ ಅಭಿಮಾನಿಗಳಿಗೆ ಇದು ಸಂಭ್ರಮ ಆಚರಣೆಯಾಗಿದೆ ಎಂದರು.



ಸಭೆಯಲ್ಲಿ ಉಪಾಧ್ಯಕ್ಷ ಕುಮಾರಸ್ವಾಮಿ ಕೊರಧಾನ್ಯಮಠ. ಸ್ಥಾಯಿ ಚೇರಮನ್ ಮುತ್ತಪ್ಪ ನೂಲ್ಕಿ
ಕನ್ನಡ ಜಾನಪದ ಪರಿಷತ್ ತಾಲೂಕು ಅಧ್ಯಕ್ಷ ಮಹದೇವ್ ಬೇವಿನಕಟ್ಟಿ ಕ ಸಾ ಪ ತಾಲೂಕು ಕಾರ್ಯದರ್ಶಿ ಬಸವರಾಜ್ ಕುರಿ ಬೀಚಿ ಬಳಗದ ಸಂಚಾಲಕ ಈಶ್ವರ್ ಬೆಟಗೇರಿ ಮುಖಂಡರಾದ ಶಿವನಗೌಡ ಪಾಟೀಲ್ ನಿಂಗನಗೌಡ ಲಕ್ಕನಗೌಡ್ರ ವೀರಪ್ಪ ಜೋಗಿ ಕಳಕನಗೌಡ ಪಾಟೀಲ್ ಅಲ್ಲಭಕ್ಷಿ ನದಾಫ್ ಗುಡದಪ್ಪ ಗೋಡಿ ಮುಖ್ಯಾಧಿಕಾರಿ ಮಹೇಶ್ ನಿಡಶೇಶಿ ಹಾಗೂ ಪ ಪಂ ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಶಿವಾನಂದ.ಎಫ್. ಗೋಗೇರಿ. ತೋಟಗುಂಟಿ.ಗದಗ**







# ಕನ್ನಡ ರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಭೆ



**ಆಲಮೇಲ :** ಪಟ್ಟಣ ತಹಶೀಲ್ದಾರ್ ಕಛೇರಿ ಆವರಣದಲ್ಲಿ ನವಂಬರ 1ರಂದು ಕನ್ನಡ ರಾಜ್ಯೋತ್ಸವ ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಹಾಗೂ ಸಿದ್ಧತೆ ಕೈಗೊಳ್ಳುವಂತೆ ಆಲಮೇಲ ತಹಸಿಲ್ದಾರ ಕೆ.ವಿಜಯಕುಮಾರ ಹೇಳಿದರು ತಹಸಿಲ್ದಾರ ಕಛೇರಿ ಸಭಾ ಭವನದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಆಲಮೇಲ ತಾಲೂಕ ದಂಡಾಧಿಕಾರಿ ಕೆ ವಿಜಯಕುಮಾರ ಮಾತನಾಡಿದರು

ನವಂಬರ್ 1ರ ರಂದು ಬೆಳಗ್ಗೆ 9:00 ಗಂಟೆ-ಯ ನಗರದ ಪ್ರಮುಖ ಬೀದಿಗಳ ಮುಖಾಂತರ ಮೆರವಣಿಗೆ ಮಾಡುವುದು

ಸುಮಾರು ಕನ್ನಡಪರ ಸಂಘಟನೆಕಾರರು ಕರ್ನಾಟಕ ರಕ್ಷಣಾ ವೇದಿಕೆ ಜಯ ಕರ್ನಾಟಕ ರಕ್ಷಣಾ ವೇದಿಕೆ ಸಂಘ ಸಂಸ್ಥೆಗಳ ಆಟೋ ಚಾಲಕರು ಅಂಗವಿಕಲರು ಮಹಿಳೆಯರು ಕನ್ನಡಪರ ಹೋರಾಟಗಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ವಿವಿಧ ಶಾಲೆಯ ವಿದ್ಯಾರ್ಥಿಗಳಿಂದ ಸಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡುವರು.

ಒಂದೇ ಒಂದೇ ಕರ್ನಾಟಕ ಒಂದೇ ನುಡಿಗಳದೊಂದಿಗೆ ಆಲಮೇಲ ತಹಶೀಲ್ದಾರ್ ಕಚೇರಿಯಿಂದ ಮೆರವಣಿಗೆ ಪ್ರಾರಂಭವಾಗುವುದು.

ತಾಯಿ ಭವನೇಶ್ವರಿ ಫೋಟೋ ಪೂಜಾಗಳದೊಂದಿಗೆ ಚಾಲನೆ ನೀಡಲಾಗುವುದು

ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರಿಗೆ ವಿಶೇಷ ಸನ್ಮಾನ ಹಮ್ಮಿಕೊಳ್ಳಲಾಗುವುದು

ಆಲಮೇಲ ತಾಲೂಕಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ವಿಶೇಷ ಸನ್ಮಾನ ಹಮ್ಮಿಕೊಳ್ಳಲಾಗಿದೆ.

ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಸಾಧಿಕ ಸುಂಬುಡ ರವಿ ಹೊಸಮನಿ ಶಿಕ್ಷಕರು ಚಂದ್ರಶೇಖರ ಹಳಿಮನಿ ಪಟ್ಟಣ ಪಂಚಾಯತಿ ಸದಸ್ಯರು ಡಾ "ಸಮೀರ್ ಹಾದಿಮನಿ.ಎ ಎಮ್ ಅತ್ತಾರ್.ಹರೀಶ್ ಯಂಟಮನ. ಎ ಕೆ ನಂದಿ ಪ್ರೌಢಶಾಲೆಯ ಪ್ರಾಚಾರ್ಯರಾದ ಮಸಳಿ ಅನೇಕ ಶಾಲೆಯ ಶಿಕ್ಷಕರು ಮತ್ತು ಸಿಆರ್‌ಪಿ ಹಾಜರಿದ್ದರು.

# ನಿಡೋಣಿಯಲ್ಲಿ ವಿವಿಧ ಕಾಮಗಾರಿಗಳಿಗೆ ಎಂಎಲ್ಸಿ ಪಾಟೀಲ ಚಾಲನೆ

**ವಿಜಯಪುರ :** ಜಿಲ್ಲೆಯ ಬಬಲೇಶ್ವರ ಮತಕ್ಷೇತ್ರದಲ್ಲಿ ಸರಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸಿಎಸ್ ಆರ್ ಫಂಡ್ ನಲ್ಲಿ ರೂ. 100 ಯೋಜನೆಯಡಿ ನಾನಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದುವಿಧಾನಪರಿಷತ್‌ಸದಸ್ಯಸುನೀಲಗೌಡ ಪಾಟೀಲ ಹೇಳಿದ್ದಾರೆ.

ಬಬಲೇಶ್ವರ ತಾಲೂಕಿನ ನಿಡೋಣಿಯಲ್ಲಿ ಕೆ.ಆರ್.ಐ.ಡಿ.ಎಲ್. ವತಿಯಿಂದ ರೂ. 50 ಲಕ್ಷ ವೆಚ್ಚದಲ್ಲಿ ಅಲ್ಪಸಂಖ್ಯಾತರ ಕಾಲನಿಗಳಲ್ಲಿ ಸಿಸಿ ರಸ್ತೆ ಕಾಮಗಾರಿ ಮತ್ತು ಪಿ.ಆರ್.ಇ.ಡಿ ವತಿಯಿಂದ ರೂ. 100 ಲಕ್ಷ ವೆಚ್ಚದಲ್ಲಿ ನಿಡೋಣಿ-ತಿಗಣಿ ಬಿದರಿ ರಸ್ತೆ ಸುಧಾರಣೆ ಕಾಮಗಾರಿ ಹಾಗೂ ಶೇಗುಣಸಿ ಗ್ರಾಮದಲ್ಲಿಕೆ.ಆರ್.ಐ.ಡಿ.ಎಲ್.ವತಿಯಿಂದ ರೂ. 25 ಲಕ್ಷ ವೆಚ್ಚದಲ್ಲಿ ಅಲ್ಪಸಂಖ್ಯಾತರ ಕಾಲನಿಗಳಲ್ಲಿ ಸಿಸಿ ರಸ್ತೆ ಕಾಮಗಾರಿಗಳಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.



ಸಚಿವ ಎಂ. ಬಿ. ಪಾಟೀಲ ಅವರ ದೂರದೃಷ್ಟಿಯ ಫಲವಾಗಿ ಬಬಲೇಶ್ವರ ಮತಕ್ಷೇತ್ರದಲ್ಲಿ ಈ ಬಾರಿ ಶೈಕ್ಷಣಿಕ ಕ್ರಾಂತಿ ಮಾಡಲಾಗುತ್ತಿದ್ದು, ರೂ. 100 ಕೋ. ಸಿ.ಎಸ್.ಆರ್ ಫಂಡ್ ಬಳಸಿ ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗುತ್ತಿದೆ. ಹೆಚ್ಚುವರಿಯಾಗಿ ಹೊಸ ಕೊಠಡಿಗಳ ನಿರ್ಮಾಣ, ಕೊಠಡಿಗಳ ದುರಸ್ಥಿ, ಕುಡಿಯಲು ಶುದ್ಧ ನೀರು ಪೂರೈಕೆ, ಶೌಚಾಲಯ ವ್ಯವಸ್ಥೆ, ಆಟದ ಮೈದಾನ, ಶಾಲೆಗಳಿಗೆ ಕಂಪೌಂಡ್ ನಿರ್ಮಾಣಕ್ಕೆ ಈ ನಿಧಿಯನ್ನುಬಳಸಲಾಗುತ್ತಿದೆಎಂದುಅವರು ತಿಳಿಸಿದರು.

ನೀರಾವರಿ ಯೋಜನೆಗಳಿಂದಾಗಿ ಮತಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ನೀಗಿದೆ. ಇಲ್ಲಿನ ಅಭಿವೃದ್ಧಿ ಕಂಡು ಬೇರೆ ಜಿಲ್ಲೆಗಳ ಜನರು ಇಲ್ಲಿ ಭೂಮಿ ಖರೀದಿಸಲು ಮುಂದಾಗುತ್ತಿದ್ದಾರೆ. ಇದರಿಂದ ರೈತರ ಜಮೀನಿಗೆಹೆಚ್ಚಿನಬೆಲೆಬಂದಿದೆ.ಇದುರೈತರ ಜೀವನದಲ್ಲಿ ಆಗಿರುವ ಬದಲಾವಣೆಯ ಪ್ರತೀಕವಾಗಿದೆ. ಸೂರ್ಯ ಚಂದ್ರರು ಇರುವವರೆಗೆ ಈ ಭಾಗದ ಜಮೀನಿಗೆ ನೀರು ಸಿಗಲಿದ್ದು, ಮುಂದಿನ ಜನಾಂಗಕ್ಕೆ ಶಾಶ್ವತ ಬದುಕು ಕಟ್ಟಿಕೊಡುವ ಕೆಲಸ ಮಾಡಲಾಗಿದೆ. ನಮ್ಮಯೋಜನೆಗಳನ್ನುಟೀಕಿಸುತ್ತಿದ್ದಜನರು ಈಗಅದೇಯೋಜನೆಗಳಫಲಾನುಭವಿಗಳಾಗಿ ಆರ್ಥಿಕವಾಗಿ ಸದೃಢರಾಗುತ್ತಿರುವುದು ಅಭಿವೃದ್ಧಿಗೆ ಸಾಕ್ಷಿಯಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ತಿಕೋಟಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈರಗೊಂಡ ಬಿರಾದಾರ, ಕೆ. ಎಚ್. ಮುಂಬಾರಡ್ಡಿ, ಬಾಪುಗೌಡ ಪಾಟೀಲ ಶೇಗುಣಸಿ, ಪಿಕೆಪಿಎಸ್ ಅಧ್ಯಕ್ಷ ಬಿ. ಜಿ. ಬಿರಾದಾರ, ಶಂಕರಗೌಡ ಪೋಲಿಸಪಾಟೀಲ, ಪಿ. ಜಿ. ಕೋರಿ, ಅಣ್ಣಪ್ಪ ಮುಚ್ಚಂಡಿ, ಶೇಗುಣಸಿ ಗ್ರಾ.ಪಂ. ಅಧ್ಯಕ್ಷೆ ಲಕ್ಮಿ ಗುಣದಾಳ, ಈರಪ್ಪ ಶಾಪೂರ, ಸಿದ್ದಪ್ಪ ಹೊಸಮನಿ, ದಾನಮ್ಮ ಜಿರಲಿ, ಕುಮಾರ ಬಾಡಗಿ, ಸೋಮಶೇಖರ ಕೋಟ್ಯಾಳ, ಜಾಫರ ಇನಾಮದಾರ,ಮಹೇಶ ಮಾಳಿ,ವೈ.ಎನ್.ಪಾಟೀಲ,ಚನ್ನಪ್ಪಕೊಪ್ಪದ,ವಿನಾಯಕ ಕೊಟ್ಟಲಗಿ,ನಿಂಗೊಂಡ ಬಿರಾದಾರ,ಅನೀಲ ಹಿರೇಮ,ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಶಾಂತ ಪೂಜಾರಿ, ಪಿ.ಆರ್.ಇ.ಡಿ.ಎಂಜಿನಿಯರ್‌ರವಿಪವಾರ, ಮುಕ್ಕನ ನಾಯಕ, ಪಿಡಿಓ ಮುಜಾವರ ಮುಂತಾದವರು ಉಪಸ್ಥಿತರಿದ್ದರು.

# ಬಿಜೆಪಿ/ಜೆಡಿಎಸ್ ಮುಖಂಡರ ಸುಳ್ಳು ಆಧಾರ ರಹಿತ ಹೇಳಿಕೆ ಮತಕ್ಷೇತ್ರದ ಜನರ ದಾರಿ ತಪ್ಪಿಸುವ ಪ್ರಯತ್ನ: ಸಿದ್ದಾರ್ಥ್ ಸಿಂಗೆ

**ಅಥಣಿ :** ಇತ್ತೀಚೆಗೆ ಬಿಜೆಪಿ/ಜೆಡಿಎಸ್ ಮುಖಂಡರುಗಳು ಕ್ಷೇತ್ರದ ಅಭಿವೃದ್ಧಿ ವಿಷಯವಾಗಿ ಪತ್ರಿಕಾಗೋಷ್ಠಿಯಲ್ಲಿ ನಮ್ಮ ಶಾಸಕರಾದ ಲಕ್ಷ್ಮಣ ಸವದಿಯವರ ವಿರುದ್ಧ ಸುಳ್ಳು ಹಾಗೂ ಆಧಾರರಹಿತ ಹೇಳಿಕೆಗಳನ್ನು ನೀಡುವ ಮೂಲಕ ಅಥಣಿ ಮತಕ್ಷೇತ್ರದ ಜನತೆಯ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅಥಣಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ಧಾರ್ಥ ಸಿಂಗೆ ಆರೋಪಿಸಿದ್ದಾರೆ.

ಅವರು ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿ ಅಥಣಿ ಮತಕ್ಷೇತ್ರದ ಜನತೆ ನಮ್ಮ ಜನಪ್ರಿಯ ಶಾಸಕರು ಹಾಗೂ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿಯವರ ಮೇಲೆ ಅಪಾರವಾದ ನಂಬಿಕೆಯನ್ನು ಹೊಂದಿದ್ದಾರೆ.

"ಶಾಸಕ ಲಕ್ಷ್ಮಣ ಸವದಿ ಅವರ ವಿಶೇಷ ಪ್ರಯತ್ನ ದ್ರಾಕ್ಷಿ ಬೆಳೆ ವಿಮೆ ಪರಿಹಾರ"

ಹವಾಮಾನ ಆಧಾರಿತವಾಗಿದ್ದು, ರೈತನ ಬೆವರಿನ ಶ್ರಮದಲ್ಲಿ ವಿಮಾ ಕಂತುಗಳನ್ನು ಕಟ್ಟಿ ವಿಮಾ ಪರಿಹಾರ ಪಡೆದುಕೊಳ್ಳುವುದು ರೈತನ ಹಕ್ಕು. ಅದು ಬಿಜೆಪಿ ಅಥವಾ ಮೋದಿಯವರು ಕೊಡಮಾಡಿದ ಬಿಕ್ಷೆಯಲ್ಲ. ಇಡೀ ರಾಜ್ಯದಲ್ಲಿಯೇ ಮೊದಲು ಶಾಸಕರಾದ ಲಕ್ಷ್ಮಣ ಸವದಿಯವರ ವಿಶೇಷ ಪ್ರಯತ್ನದಿಂದ ಅಥಣಿ ಹಾಗೂ ಕಾಗವಾಡ ಮತಕ್ಷೇತ್ರದ 2690 ರೈತರು 40ಕೋಟಿ 12ಲಕ್ಷ ರೂಪಾಯಿಗಳ ವಿಮಾ ಪರಿಹಾರವನ್ನು ಪಡೆದುಕೊಂಡಿ-ದ್ದಾರೆ.ಇದರಲ್ಲಿಅಥಣಿಮತಕ್ಷೇತ್ರದ2210ರೈತರು32ಕೋಟಿ 59 ಲಕ್ಷ ರೂಪಾಯಿಗಳ ಪರಿಹಾರವನ್ನು ಪಡೆದುಕೊಂಡಿ-ದ್ದಾರೆ ಇದೆಲ್ಲ ಸಾಧ್ಯವಾಗಿದ್ದು ಆಗಸ್ಟ್ ತಿಂಗಳಿನಿಂದಲೇ ಶಾಸಕರಾದ ಲಕ್ಷ್ಮಣ ಸವದಿ ಅವರು ವಿಶೇಷ ಮುತುವರ್ಜಿ ವಹಿಸಿತೋಟಗಾರಿಕೆಇಲಾಖೆಯಹಿರಿಯಅಧಿಕಾರಿಶಕೀಲ್ ಅಹಮದ್ ರವರಿಗೆ ದುಂಬಾಲು ಬಿದ್ದು ರಾಜ್ಯದ ಯಾವುದೇ ಜಿಲ್ಲೆಗೆ ಸಿಗದ ವಿಮಾ ಪರಿಹಾರ ಅಥಣಿ ಮತ್ತು ಕಾಗವಾಡ ಮತಕ್ಷೇತ್ರದ ರೈತರಿಗೆ ದೊರಕಿಸಿಕೊಟ್ಟಿದ್ದಾರೆ.

"ಕೊಕಟನೂರಪಶುವೈದ್ಯಕೀಯಮಹಾವಿದ್ಯಾಲಯಶಾಸಕ ಲಕ್ಷ್ಮಣ ಸವದಿ ಅವರ ಕೊಡುಗೆ"

ತಾಲೂಕಿನ ಕೊಕಟನೂರ ಗ್ರಾಮದಲ್ಲಿ ನಿರ್ಮಾಣವಾಗಿರುವ ಪಶು ವೈದ್ಯಕೀಯ ಮಹಾವಿದ್ಯಾಲಯವೂ ಕೂಡ ಅಂದು ಹಾಗೂ ಇಂದು ಶಾಸಕರಾಗಿರುವ ಲಕ್ಷ್ಮಣ ಸವದಿಯವರ ಹಾಗೂ ಕಾಂಗ್ರೆಸ್ ಪಕ್ಷದ ಸರ್ಕಾರಗಳ ಕೊಡುಗೆ. ಇದರಲ್ಲಿ ಪಶು ವೈದ್ಯಕೀಯ ಮಹಾವಿದ್ಯಾಲಯಕ್ಕೆ ಆರ್ ಎಸ್ ಎಸ್ ಮತ್ತು ಜನಸಂಘದ ಮುಖಂಡರಾಗಿದ್ದ ಭಾವುರಾವ ದೇಶಪಾಂಡೆಯವರ ಹೆಸರನ್ನು ಇಟ್ಟಿದ್ದು ಬಿಟ್ಟರೆ ಬಿಜೆಪಿ ಹಾಗೂ ಹಿಂದಿನ ಲಾಟರಿ ಶಾಸಕರ ಕೊಡುಗೆ ಶೂನ್ಯ. ಸ್ವತಃ ಕೃಷಿಕರಾಗಿರುವ ನಮ್ಮ ಜನಪ್ರೀಯ ಶಾಸಕರಾದ ಲಕ್ಷ್ಮಣ ಸವದಿ ಅವರು ಕೃಷಿಕರ ಬಗ್ಗೆ ಚಿಂತನೆ ನಡೆಸಿದ ಫಲವೇ ಪಶುವೈದ್ಯಕೀಯ ಮಹಾವಿದ್ಯಾಲಯ ಹಾಗೂ ಈಗ ಘೋಷಿಸಲಾಗಿರುವ ಕೃಷಿ ಮಹಾವಿದ್ಯಾಲಯ ಶಾಸಕ ಲಕ್ಷ್ಮಣ ಸವದಿ ಅವರ ಕೊಡುಗೆ ಎಂದು ಅಥಣಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ಧಾರ್ಥ ಸಿಂಗೆ ಹೇಳಿದರು.

"ಅಥಣಿಮತಕ್ಷೇತ್ರದಸರ್ವಾಂಗೀಣಅಭಿವೃದ್ಧಿಯಹರಿಕಾರ ಶಾಸಕ ಲಕ್ಷ್ಮಣ ಸವದಿ"

ಅಥಣಿ ಮತಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ನಮ್ಮ ಶಾಸಕರಾದಲಕ್ಷ್ಮಣಸವದಿಅವರುಹಗಲಿರುಳುಬಿಡುವಿಲ್ಲದ ಶ್ರಮಿಸಿದ / ಚಿಂತಿಸಿದ ಫಲವೇ ಇಂದು ಕ್ಷೇತ್ರದ ಹಲವಾರು ಗ್ರಾಮಗಳಲ್ಲಿ ಸರ್ಕಾರಿ ಹೈಸ್ಕೂಲ್ ಗಳು, ಪಿಯೂ ಹಾಗೂ ಪದವಿ ಕಾಲೇಜುಗಳು, ಡಿಪ್ಲೊ?ಲಮಾ, ಐಟಿಐ ಕಾಲೇಜುಗಳ ಸ್ಥಾಪನೆ, ಸುಸಜ್ಜಿತ ವಸತಿ ಶಾಲೆಗಳ ನಿರ್ಮಾಣವಾಗಿದೆ. ಇಂತಹ ಅಭಿವೃದ್ಧಿಶೀಲ ನಾಯಕರಿಗೆ ಅಭಿವೃದ್ಧಿ ಹರಿಕಾರರೆನ್ನದೇಕ್ಷೇತ್ರದಜನಸಂಕಷ್ಟದಲ್ಲಿಇದ್ದಾಗಮೊಬೈಲ್ ಸ್ವಿಚ್ ಆಫ್ ಮಾಡಿ ರೆಸಾರ್ಟ್ ವಾಸಿಯಾಗಿದ್ದವರನ್ನು ಅಭಿವೃದ್ಧಿ ಹರಿಕಾರರು ಎನ್ನಬೇಕೆ ? ಎಂದು ಅಥಣಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ಧಾರ್ಥ ಸಿಂಗೆ ಪ್ರಶ್ನಿಸಿದ್ದಾರೆ

"ಶಾಸಕ ಲಕ್ಷ್ಮಣ ಸವದಿ ಅವರು ನೀರಾವರಿ ಯೋಜನೆಗಳನ್ನ ಮೆಚ್ಚಿ ಜನ ಪ್ರೀತಿಯಿಂದ ಅವರನ್ನು ಹಸಿರು ಕ್ರಾಂತಿ ಹರಿಕಾರರೆಂದು ಕರೆಯುತ್ತಾರೆ"

ಅಥಣಿಯಲ್ಲಿಮಾಜಿಶಾಸಕರಸಹೋದರರೊಬ್ಬರುಇತ್ತೀಚೆಗೆ ನೀರಾವರಿ ಕುರಿತು ಕಾಗಕ್ಕಗುಬ್ಬಕ್ಕ ಕಥೆ ಹೇಳಿದ್ದು ಬಿಟ್ಟರೆ ರೈತರ ಕುರಿತುಅವರಕಾಳಜಿಕೇವಲಮೊಸಳೆಕಣ್ಣೀರುಎಂಬುದುಎದ್ದು ಕಾಣುತ್ತದೆ.ಅಪ್ರೂವಲ್ಆಗದಕಾಮಗಾರಿಯಶಂಕುಸ್ಥಾಪನೆ ಗೋಕಾಕದಲ್ಲಿ ಮಾಡಿಸಿದ್ದು ಬಿಟ್ಟರೆ ಬೇರೆ ಏನನ್ನೂ ಮಾಡಿಲ್ಲ. ಕೊಟ್ಟಲಗಿ-ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಗೆ ಹಣ ಬಿಡುಗಡೆ ಸೇರಿದಂತೆ ನೆನೆಗುದಿಗೆ ಬಿದ್ದಿದ್ದ ಎಲ್ಲ ನೀರಾವರಿ ಯೋಜನೆಗಳ ಕಾಮಗಾರಿ ಪ್ರಾರಂಭ ಹಾಗೂ ಪೂರ್ವ ಭಾಗದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಿದ್ದು ಅಥಣಿ ಮತಕ್ಷೇತ್ರದ ಜನಪ್ರಿಯ ಶಾಸಕರು ಹಾಗೂ ಮಾಜಿ ಉಪಮುಖ್ಯಮಂತ್ರಿಗಳಾದ ಲಕ್ಷ್ಮಣ ಸವದಿ ಯವರು ಈ ಕಾರಣಕ್ಕಾಗಿಯೇ ಜನ ಪ್ರೀತಿಯಿಂದ ಅವರನ್ನು ಹಸಿರು ಕ್ರಾಂತಿ ಹರಿಕಾರರೆಂದು ಕರೆಯುತ್ತಾರೆ ಎಂದು ಅಥಣಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ಧಾರ್ಥ ಸಿಂಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

# ವಕ್ಫ್ ಹುನ್ನಾರ ತಡೆಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳರಿಗೆ ಹೊನವಾಡ ರೈತರಿಂದ ಮನವಿ



**ವಿಜಯಪುರ :** ಬಬಲೇಶ್ವರ ತಾಲ್ಲೂಕಿನ ಹೊನವಾಡ ಗ್ರಾಮದ 89ಕ್ಕೂ ಹೆಚ್ಚು ರೈತರ ಆಸ್ತಿಗಳನ್ನು ವಕ್ಫ್ ಆಸ್ತಿಗಳೆಂದು ಘೋಷಣೆ ಮಾಡುತ್ತಿರುವುದರಿಂದ ಆಗುತ್ತಿರುವ ಅನ್ಯಾಯಕ್ಕೆ, ನ್ಯಾಯ ಕಲ್ಪಿಸುವಂತೆ ಕೋರಿ ರೈತರು ತಮ್ಮ ದಾಖಲೆಗಳೊಂದಿಗೆ ನಗರ ಶಾಸಕರ ಸಾರ್ವಜನಿಕರ ಸಂಪರ್ಕ ಕಾರ್ಯಾಲಯಕ್ಕೆ ಶನಿವಾರ ಮನವಿ ಪತ್ರ ಸಲ್ಲಿಸಿದ್ದಾರೆ. ಹೊನವಾಡ ಗ್ರಾಮದ ನಿವಾಸಿಗಳು ನಾಲ್ಕೈದು ತಲೆಮಾರುಗಳಿಂದ ಸಾಗುವಳಿಮಾಡುತ್ತಬಂದಿರುವಸುಮಾರು1151ಎಕರೆ ಜಮೀನನ್ನು ವಕ್ಫ್ ಆಸ್ತಿ ಎಂದು ದಾಖಲು ಮಾಡುವ ಹುನ್ನಾರ ನಡೆಸಿರುವುದರಿಂದ ಆತಂಕವಾಗಿದೆ ಎಂದು ತಿಳಿಸಿದ್ದಾರೆ.

ಈ ಜಮೀನುಗಳ ಪಹಣಿ ಮತ್ತು ಇನಿತ್ತರ ದಾಖಲಾತಿಗಳಲ್ಲಿ ನಮ್ಮ ಹೆಸರು ದಾಖಲಿದೆ. ಹೀಗಿದ್ದರೂ ಸಹ ಜಿಲ್ಲಾ ವಕ್ಫ್ ಸಂಸ್ಥೆಯವರು ಹಾಗೂ ಅಧಿಕಾರಿಗಳು ಎಲ್ಲವೂ ವಕ್ಫ್ ಆಸ್ತಿಗಳಿದ್ದು, ಕಬ್ಜೆಯಿಂದ ಹೊರ ಹಾಕುತ್ತೇವೆ ಎಂದು ಬೆದರಿಸುತ್ತಿದ್ದಾರೆ. ಇದರ ಹಿಂದೆ ವಕ್ಫ್ ಸಚಿವ ಜಮೀರ್ ಅಹ್ಮದ್ ಅವರ ಕುಮ್ಮಕ್ಕು ಇರುತ್ತದೆ. ಈಚೆಗೆ ನಗರದಲ್ಲಿ ನಡೆದ ಅದಾಲತ್ ಸಭೆಯಲ್ಲಿ ವಕ್ಫ್ ಸಚಿವರ ಮೌಖಿಕ ಆದೇಶದಂತೆ ರೈತರಿಗೆ ಕಾನೂನು ಬಾಹಿರವಾಗಿ ನೋಟಿಸ್ ನೀಡಲಾಗುತ್ತಿದೆ. ಕೂಡಲೇ ತಾವು ಮಧ್ಯ ಪ್ರವೇಶಿಸಿ, ರೈತರಿಗೆ ನ್ಯಾಯ ಕಲ್ಪಿಸಿಕೊಡಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.

# ಕೊಪ್ಪಳ ಜಿಲ್ಲಾ ವಾರ್ತಾಧಿಕಾರಿಯಾಗಿ ಡಾ. ಸುರೇಶ್ ಜಿ. ಅಧಿಕಾರ ಸ್ವೀಕಾರ



**ಕೊಪ್ಪಳ :** ಕೊಪ್ಪಳ ಜಿಲ್ಲಾ ವಾರ್ತಾಧಿಕಾರಿಯಾಗಿ ಡಾ.ಸುರೇಶ್ ಜಿ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು.

ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಭಾರಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಗವಿಸಿದ್ದಪ್ಪ ಹೊಸಮನಿ ಅವರು ರಾಯಚೂರು ಜಿಲ್ಲೆಗೆ ವರ್ಗಾವಣೆಯಾದ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಸಹಾಯಕ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ಡಾ.ಸುರೇಶ್ ಜಿ ಅವರು ವಹಿಸಿಕೊಂಡರು ನಿರ್ಗಮಿತ ಅಧಿಕಾರಿಗಳು ನೂತನ ಜಿಲ್ಲಾ ವಾರ್ತಾಧಿಕಾರಿಗಳಿಗೆ ಹೂಗುಚ್ಚ ನೀಡಿ ಅಧಿಕಾರ ಹಸ್ತಾಂತರಿಸಿದರು.

ಡಾ.ಸುರೇಶ್ ಜಿ ಅವರು ಬೀದರ್ ಜಿಲ್ಲಾ ವಾರ್ತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದಕ್ಕೂ ಪೂರ್ವದಲ್ಲಿ ಕೊಪ್ಪಳ ಜಿಲ್ಲಾ ಪ್ರಭಾರಿ ವಾರ್ತಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲೆಯ ಪತ್ರಕರ್ತರು, ಕಚೇ-ರಿಯ ಸಿಬ್ಬಂದಿಯವರು ಡಾ.ಸುರೇಶ್ ಜಿ ಅವರಿಗೆ ಆತ್ಮೀಯವಾಗಿ ಸ್ವಾಗತ ಕೋರಿದರು.

# ಎಸ್.ಎಫ್.ಸಿ ಹಾಗೂ ಪುರಸಭೆ ಅನುದಾನದಲ್ಲಿ ಹೊಲಿಗೆ ಯಂತ್ರ, ಯುಪಿಎಸ್ ವಿತರಿಸಿದ ಶಾಸಕ ಲಕ್ಷ್ಮಣ ಸವದಿ



**ಅಥಣಿ :** ಪುರಸಭೆ ವ್ಯಾಪ್ತಿಯ 27 ವಾರ್ಡಗಳಲ್ಲಿನ 2023-2024ರ ಎಸ್.ಎಫ್.ಸಿ ಹಾಗೂ ಪುರಸಭೆ ಅನುದಾನದ ಶೇ. 24.10, ಶೇ. 7.25 ಹಾಗೂ ಶೇ. 5 ಯೋಜನೆಯಡಿ ಫಲಾನುಭವಿಗಳಿಗೆ ಸರ್ಕಾರಿ ಯೋಜನೆಗಳ ಅಡಿಯಲ್ಲಿ ಹೊಲಿಗೆ ಯಂತ್ರ ಹಾಗೂ ಯುಪಿಎಸ್ ಗಳನ್ನು ವಿತರಣೆ ಮಾಡುವ ಮೂಲಕ ಮಾತನಾಡಿ ಬಡ ಮತ್ತು ನಿರ್ಗತಿಕ ಜನರ ಜೀವನದಲ್ಲಿ ನೆಮ್ಮದಿ ಮತ್ತು ಸಂತೋಷವನ್ನು ಕಾಣಲು ಸಾಧ್ಯವಾಗಿದೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು

ಪಟ್ಟಣದ ಪುರಸಭೆ ಸಭಾಭವನದಲ್ಲಿ ಸೋಮವಾರ ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು, ಪುರಸಭೆ ಕಾರ್ಯಾಲಯ ಅಥಣಿ ಸಹಯೋಗದಲ್ಲಿ ಜರುಗಿದ ಸರಳ ಕಾರ್ಯಕ್ರಮದಲ್ಲಿ 2023- 2024ರ ಎಸ್.ಎಫ್.ಸಿ ಹಾಗೂ ಪುರಸಭೆ ಅನುದಾನದ ಶೇ. 24.10, ಶೇ. 7.25 ಹಾಗೂ ಶೇ. 5 ಯೋಜನೆಯಡಿಯಲ್ಲಿ 85 ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಡ ಜನರಿಗೆ ಕಿಟ್‌ಗಳನ್ನು ವಿತರಣೆ ಮಾಡಿ ಮಾತನಾಡಿದ ಶಾಸಕ ಲಕ್ಷ್ಮಣ ಸವದಿ ಅವರು ಯಾರು ಸಾರ್ವಜನಿಕ ಜೀನವದಲ್ಲಿ ಜನ ಪರವಾದ ಕೆಲಸಗಳನ್ನು ಮಾಡುತ್ತಾರೋ ಅಂಥವರನ್ನು ಬೆಂಬಲವಾಗಿ ನಿಲ್ಲುತ್ತಾರೆ, ಬಡ ಜನರು ಜೀವನವನ್ನು ಸಾಗಿಸಲು ಹೊಲಿಗೆ ಯಂತ್ರಗಳನ್ನ ಮತ್ತು ವಿಕಲಚೇತನಿಗೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಯುಪಿಎಸ್ ಗಳನ್ನು ವಿತರಣೆ ಮಾಡಿ ಅವರ ಜೀವನದಲ್ಲಿ ಬೆಳಕನ್ನು ಚೆಲ್ಲುವ ಒಂದು ಸಣ್ಣ ಪ್ರಯತ್ನವಾಗಿದೆ ಎಂದು ಹೇಳಿದರು.

ಪುರಸಭೆ ಮುಖ್ಯಾದಿಕಾರಿ ಅಶೋಕ ಗುಡಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಶಿವಲೀಲಾ ಬುಟಾಳಿ, ಉಪಾಧ್ಯಕ್ಷ ಭುವನೇಶ್ವರಿ ಯಂಕಚಿ, ಪುರಸಭೆ ಸದಸ್ಯರಾದ ದತ್ತಾ ವಾಸ್ಟರ, ಸಂತೋಷ ಸಾವಡಕರ, ಮಲ್ಲು ಹುದ್ದಾರ, ಮಲ್ಲಿಕಾರ್ಜುನ ಬುಟಾಳಿ, ರಾಜು ಗುಡೂಡಗಿ, ಪ್ರಮೋದ ಬಿಳ್ಳೂರ, ಶಾಂತಾ ಲೋಣಾರೆ,

ವಿದ್ಯಾ ಐಹೊಳೆ, ವಿದ್ಯಾ ಹಳದಮಳ್ಳ, ಮೃಣಾಲಿನಿ ದೇಶಪಾಂಡೆ ಸೇರಿದಂತೆ 27 ಪುರಸಭೆ ಸದಸ್ಯರು ಮತ್ತು ಮಾಜಿ ಪುರಸಭೆ ಅಧ್ಯಕ್ಷ ದಿಲೀಪ ಲೋಣಾರೆ, ಮುಖಂಡರಾದ ರಾಮನಗೌಡಾ ಪಾಟೀಲ, ರವಿ ಬಡಕಂಬಿ, ಮಲ್ಲು ಕುಲ್ಲೋಳ್ಳಿ. ಶಿದಲಿಂಗ ಮಡ್ಡಿ, ಮುತ್ತು ಮೋಕಾಶಿ, ಹಾಗೂ ಸೇರಿದಂತೆ ಪುರಸಭೆಯ ನೌಕರರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ತಾಳಿಕೋಟೆಯಲ್ಲಿ ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟ

**ತಾಳಿಕೋಟೆ :** ಐತಿಹಾಸಿಕ ತಾಳಿಕೋಟೆ ನಗರದಲ್ಲಿ 2024-25ನೇ ಸಾಲಿನ ಬಾಲಕ ಮತ್ತು ಬಾಲಕೀಯರ ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟವು ನವ್ಹೆಂಬರ್ 3 ರಿಂದ 5 ರವರೆಗೆ 3 ದಿನಗಳ ಕಾಲ ಶ್ರೀ ಎಚ್.ಎಸ್.ಪಾಟೀಲ(ಸ್ವತಂತ್ರ) ಪಧವಿಪೂರ್ವ ಮಹಾ ವಿದ್ಯಾಲಯದ ಆವರಣದಲ್ಲಿ ನಡೆಯಲಿವೆ ಎಂದು ಶ್ರೀ ಸಂಗಮಾರ್ಯ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಎಚ್.ಎಸ್.ಪಾಟೀಲ ಅವರು ಹೇಳಿದರು. ಸೋಮವಾರರಂದು ಶ್ರೀ ಎಸ್.ಎಸ್.ಸಭಾಭವನದಲ್ಲಿ ಕರೆಯಲಾದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು ಶಾಲಾ ಶಿಕ್ಷಣ ಇಲಾಖೆ (ಪಧವಿಪೂರ್ವ) ಬೆಂಗಳೂರ, ವಿಜಯಪುರ, ಹಾಗೂ ಶ್ರೀ ಸಂಗಮಾರ್ಯ ವಿದ್ಯಾ ಸಂಸ್ಥೆಯ ಶ್ರೀ ಎಚ್.ಎಸ್.ಪಾಟೀಲ(ಸ್ವತಂತ್ರ) ಪಧವಿ ಪೂರ್ವ ಮಹಾ ವಿದ್ಯಾಲಯ ತಾಳಿಕೋಟೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆಯಲಿರುವ ಈ ರಾಜ್ಯಮಟ್ಟದ ಬಾಲಕ ಮತ್ತು ಬಾಲಕೀಯರ ವ್ಹಾಲಿಬಾಲ್ ಕ್ರೀಡಾಕೂಟದಲ್ಲಿ ರಾಜ್ಯದ 32 ಜಿಲ್ಲೆಗಳಿಂದ ತಲಾ ಒಂದು ಜಿಲ್ಲೆಯಿಂದ 12-12 ತಂಡಗಳಂತೆ ಒಟ್ಟು 900 ಕ್ರೀಡಾಪಟುಗಳು ಆಗಮಿಸಲಿದ್ದಾರೆಂದರು. ಆಗಮಿಸುವ ಎಲ್ಲ ಕ್ರೀಡಾಪಟುಗಳಿಗೆ ವಸತಿ, ಊಟದ ವ್ಯವಸ್ಥೆ ಪಾರಿತೋಷಕಗಳ ವಿತರಣೆಗೆ ಎಲ್ಲ ರೀತಿಯ ತಯಾರಿಯನ್ನು ಮಾಡಿಕೊಳ್ಳಲಾಗಿದೆ ವ್ಹಾಲಿಬಾಲ್ ಕ್ರೀಡಾಕೂಟಕ್ಕೆ ಅವಶ್ಯವಿರುವ ಕ್ರೀಡಾಂಗಣದ ಸಿದ್ದತೆಯೂ ಕೂಡಾ ಮಾಡಿಕೊಳ್ಳಲಾಗುತ್ತಿದೆ ಇನ್ನೇರಡು ದಿನಗಳಲ್ಲಿ ಕ್ರೀಡಾಂಗಣ ಸಂಪೂರ್ಣ ಸಿದ್ದತೆಗೊಳ್ಳಲಿದೆ ಎಂದರು. ವಿದ್ಯಾರ್ಥಿಗಳ ವಸತಿಗಾಗಿ ಎಸ್.ಎಸ್.ವಿದ್ಯಾ ಸಂಸ್ಥೆ, ಎಸ್.ಕೆ.ಮಹಾ ವಿದ್ಯಾಲಯ,

ಶ್ರೀ ಸರ್ವಜ್ಞ ವಿದ್ಯಾಪೀಠ ಶಿಕ್ಷಣ ಸಂಸ್ಥೆ, ಶ್ರೀ ಘನಮಠೇಶ್ವರ ಶಿಕ್ಷಣ ಸಂಸ್ಥೆ, ಕುವೆಂಪು ಶಿಕ್ಷಣ ಸಂಸ್ಥೆಯಲ್ಲಿ ಎಲ್ಲ ಸಕಲ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ ಕ್ರೀಡಾಪಟುಗಳನ್ನು ಕರೆತರಲು ಮತ್ತು ಕರೆದುಕೊಂಡು ಹೋಗಲು ಅಲ್ಲದೇ ಕ್ರೀಡಾಕೂಟದ ಯಶಸ್ವಿಗೆ ತಾಳಿಕೋಟೆ ನಗರದ ಎಲ್ಲ ಶಿಕ್ಷಣ ಸಂಸ್ಥೆಯವರು ಬಸ್ ಸೌಲಭ್ಯಗಳನ್ನು ಕಲ್ಪಿಸಿಕೊಡುವದರೊಂದಿಗೆ ಎಲ್ಲ ರೀತಿಯ ಬರವಸೆಯನ್ನು ನೀಡಿದ್ದಾರೆ ತಾಳಿಕೋಟೆ ನಗರದಲ್ಲಿ ನಡೆಯುತ್ತಿರುವ ಈ ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟವನ್ನು ರಾಷ್ಟ್ರಮಟ್ಟದ ಕ್ರೀಡಾಕೂಟಗಳ ಮಾದರಿಯಲ್ಲಿ ನಡೆಸಲು ಸಂಪೂರ್ಣ ಸಹಕಾರವನ್ನು ತಾಳಿಕೋಟೆ ನಗರದ ಮುಖಂಡರುಗಳು, ಜನರು, ಕ್ರೀಡಾಭಿಮಾನಿಗಳು ಮುಂದೆ ಬಂದಿದ್ದಾರೆ



ಅಲ್ಲದೇ ಉತ್ಸುಕರಾಗಿದ್ದಾರೆಂದರು.

ದಿ.3 ರಂದು ಮಧ್ಯಾಹ್ನ ವೇಳೆಗೆ ಎಲ್ಲ ಕ್ರೀಡಾಪಟುಗಳು ಆಗಮಿಸಲಿದ್ದು 2 ಗಂಟೆಗೆ ಕ್ರೀಡಾಪಟುಗಳೊಂದಿಗೆ ಪ್ರಭಾತಪೇರಿಯು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ನಡೆಯಲಿದೆ ನಂತರ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವು ಜರುಗಲಿದ್ದು ಈ ಕಾರ್ಯಕ್ರಮದ ಉದ್ಘಾಟನೆಗೆ ಶಿಕ್ಷಣ ಸಚೀವರಾದ ಮಧು ಬಂಗಾರಪ್ಪನವರು ಆಗಮಿಸುವ ನಿರಿಕ್ಷೆ ಇದ್ದು ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲ ಅವರು ಆಗಮಿಸಲಿದ್ದಾರೆ, ಕ್ರೀಡಾ ದ್ವಜಾರೋಹಣವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಅವರು ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೋಪ್ & ಡಿಟರ್ಜಂಟ್ ನಿಗಮ ಮಂಡಳಿಯ ಅಧ್ಯಕ್ಷ ಶಾಸಕ ಸಿ.ಎಸ್.ನಾಡಗೌಡ(ಅಪ್ಪಾಜಿ) ಅವರು ವಹಿಸಲಿದ್ದಾರೆ.

ಸ್ಮರಣ ಸಂಚಿಕೆ ಬಿಡುಗಡೆಯನ್ನು ದೇವರ ಹಿಪ್ಪರಗಿ ಶಾಸಕ ರಾಜುಗ-ೌಡ ಪಾಟೀಲ(ಕು.ಸಾಲವಾಡಗಿ) ಅವರು ನೇರವೇರಿಸಲಿದ್ದಾರೆಂದರು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ವಿಧಾನ ಪರಿಷತ್ ಸದಸ್ಯಗಳು, ಜಿಲ್ಲಾಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿ ವರ್ಗದವರು ಆಗಮಿಸಲಿದ್ದಾರೆಂದು ಅಧ್ಯಕ್ಷ ಎಚ್.ಎಸ್.ಪಾಟೀಲ ಅವರು ಹೇಳಿದರು.

ಇನ್ನೋರ್ವ ನಿವೃತ್ತ ದೈಹಿಕ ಶಿಕ್ಷಕ ಆರ್.ಎಲ್.ಕೊಪ್ಪದ ಅವರು ಮಾತನಾಡಿ ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟಕ್ಕೆ 4 ಗ್ರೌಂಡ್‌ಗಳನ್ನು ಸಿದ್ದತೆಗೊಳಿಸಲಾಗುತ್ತಿದೆ ಒಂದೊಂದು ಗ್ರೌಂಡನ್ನು ಒಬ್ಬಬ್ಬರು ದತ್ತುಗೆ ಪಡೆದು-ಕೊಂಡು ಸಿದ್ದತೆಯಲ್ಲಿ ತೊಡಗಿ-ಕೊಂಡಿದ್ದಾರೆ ಈ ಕ್ರೀಡಾಕೂಟದಲ್ಲಿ 25 ಟೆಕ್ನಿಕಲ್ ಕ್ರೀಡಾಧಿಕಾರಿಗಳು, 30 ದೈಹಿಕ ಶಿಕ್ಷಣಾಧಿಕಾರಿಗಳು, ಅಲ್ಲದೇ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ನಿರ್ಣಾಯಕರಾಗಿ ಕೆಲಸ ನಿರ್ವಹಿಸಿದಂತವರೂ ಕೂಡಾ ಇದರಲ್ಲಿ ಭಾಗವಹಿಸಿ ತಮ್ಮ ನಿರ್ಣಯವನ್ನು ಮಂಡಿಸಲಿದ್ದಾರೆ ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಣೆ ಎಲ್ಲರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ 3 ರಂದು ಕಾರ್ಯಕ್ರಮದ ಉದ್ಘಾಟನೆಯ ನಂತರ ಪ್ರದರ್ಶನ ಪಂದ್ಯ ನಡೆಯಲಿದೆ ಮರುದಿನ ದಿ.4 ರಂದು ವಿಶೇಷವಾಗಿ ಸಾಯಂಕಾಲ 6 ಗಂಟೆಯಿಂದ 9 ಗಂಟೆಯವರೆಗೆ ಹೊನಲು ಬೆಳಕಿನ ಪಂದ್ಯ ನಡೆಯಲಿದೆ ಇದರ ಸಿದ್ದತೆಯನ್ನು ಮಾಡಿಕೊಳ್ಳಲಾಗುತ್ತಿದೆ ಕ್ರೀಡಾಪಟುಗಳಿಗಾಗಿ ಊಟದ ಜೊತೆಗೆ ತತ್ತಿ, ಬಾಳೆ ಹಣ್ಣು ನೀಡಲು ಒದಗಿಸಲು ಮುಂದಾಗಿದ್ದೇವೆ ಕ್ರೀಡಾಕೂಟದ ವಿಕ್ಷಣೆಗೆ 500 ಮೀಟರ್ ಗ್ಯಾಲರ್ ನಿರ್ಮಿಸಲಾಗುತ್ತಿದೆ ಸುಮಾರು 5 ಸಾವಿರ ಜನರು ಕುಳಿತಕೊಂಡು ಕ್ರೀಡಾಕೂಟವನ್ನು ವಿಕ್ಷೀಸಲು ಅನುವು ಮಾಡಿಕೊಡಲಾಗುತ್ತಿದೆ ಎಂದ ಅವರು ಅಂಬ್ಯೂಲೇನ್ಸ್, ವೈದ್ಯರನ್ನು ಈಗಾಗಲೇ ನೇಮಿಸಲಾಗಿದೆ ಪ್ರತಿ ತಂಡದೊಂದಿಗೆ ಓರ್ವ ಮ್ಯಾನೇಜರ್, ಓರ್ವ ಕೋಚರ್ ಆಗಮಿಸಲಿದ್ದಾರೆಂದು ಹೇಳಿದ ಕೊಪ್ಪದ ಅವರು ತಾಳಿಕೋಟೆ ನಗರದಲ್ಲಿ ವ್ಹಾಲಿಬಾಲ್ ಕ್ರೀಡಾಕೂಟಕ್ಕೆ ಮುನ್ನುಡಿ ಬರೆದಂತವರು ನಮ್ಮಿಂದ ಈಗ ದೂರಾಗಿದ್ದಾರೆ ಅವರನ್ನು ಸ್ಮರಿಸುವಂತಹ ಕಾರ್ಯ ಈ ಕಾರ್ಯಕ್ರಮದಲ್ಲಿ ನಡೆಯಲಿದೆ ಎಂದರು.

ಇನ್ನೋರ್ವ ಶ್ರೀ ಘನಮಠೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಎಂ.ಸಜ್ಜನ ಅವರು ಮಾತನಾಡಿ ಕ್ರೀಡಾಕೂಟ ಎಂದಾಕ್ಷಣ ಸೋಲು ಗೆಲವು ಸಾಮಾನ್ಯವಾಗಿದೆ ಇದರಲ್ಲಿ ಗೊಂದಲ ಆಗದಂತೆ ಸಿಸ್ತು ಸಮಿತಿಯನ್ನು ನೇಮಿಸಲಾಗಿದೆ ಅದರ ಜೊತೆಗೆ ಕ್ರೀಡಾಕೂಟದ ಯಶಸ್ವಿಗೆ ಅನೇಕ ಸಮಿತಿಗಳನ್ನು ರಚಿಸಿ ಕೆಲಸ ಜವಾಬ್ದಾರಿಯನ್ನು ವಹಿಸಲಾಗುತ್ತಿದೆ ಕ್ರೀಡಾಭಿಮಾನಿಗಳ, ಎಲ್ಲ ನಾಗರಿಕರ ಸಹಕಾರವು ಅಷ್ಟೇ ಮುಖ್ಯವಾಗಿದೆ ಇದಕ್ಕೆ ಎಲ್ಲ ರೀತಿಯ ಸಹಕರಿಸುವದರ ಜೊತೆಗೆ ವಿವಿಧ ಕಾರ್ಯಗಳಲ್ಲಿ ಭಾಗಿಯಾಗುತ್ತಿರುವದು ಕ್ರೀಡಾಕೂಟದ ಉತ್ಸುಕತೆ ಇನ್ನಷ್ಟು ಹೆಚ್ಚಿಸಿದಂತಾಗಿದೆ ಎಂದರು.

ಇನ್ನೋರ್ವ ಶಿಕ್ಷಕ ಶ್ರೀಕಾಂತ ಪತ್ತಾರ ಅವರು ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟಕ್ಕೆ ಎಲ್ಲರೂ ಸಹಕಾರ ನೀಡಲು ಮುಂದೆ ಬಂದಿರುವ ಕುರಿತು ಹರ್ಷ ವ್ಯಕ್ತಪಡಿಸಿದರು.

ಈ ಸಮಯದಲ್ಲಿ ಎಸ್.ಎಸ್.ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಸಚೀನ ಪಾಟೀಲ, ಆಡಳಿತಾಧಿಕಾರಿ ಕಿರಣ ಪಾಟೀಲ, ಮುಖಂಡರುಗಳಾದ ಪ್ರಭುಗೌಡ ಮದರಕಲ್ಲ, ಡಾ.ನಜೀರ ಕೋಳ್ಯಾಳ, ಎಸ್.ಎಸ್.ಕಂತಲಗಾವಿ, ಬಾಪುಗೌಡ ಪಾಟೀಲ, ಬಿ.ಆರ್.ಪೋಲೀಸ್‌ಪಾಟೀಲ, ಬಿ.ಬಿ.ಬಿರಾದಾರ, ದೈಹಿಕ ಶಿಕ್ಷಕ ಎಸ್.ವ್ಹಿ. ಮಂಗ್ಯಾಳ, ಎಂ.ಎಸ್.ರಾಯಗೊಂಡ, ಪ್ರಾಚಾರ್ಯ ಎಂ.ಎಸ್.ಬಿರಾದಾರ, ಮೊದಲಾದವರು ಇದ್ದರು.

# ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ: ಅರ್ಜಿ ಅಹ್ವಾನ

**ಬೆಳಗಾವಿ :** ಪ್ರಸ್ತಕ ಸಾಲಿನ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಸಂಚಾರಿ ಕುರಿಗಾರರಿಗೆ ಗುರುತಿನ ಚೀಟಿ ಪಡೆಯಲು ಜಿಲ್ಲೆಯಲ್ಲಿರುವ ಕನಿಷ್ಠ 20 ಕ್ಕಿಂತ ಹೆಚ್ಚು ಕುರಿ ಮೆಕ್ಕೆಗಳನ್ನು ಹೊಂದಿರುವ ಸಂಚಾರಿ ಕುರಿಗಾರರಿಂದ ಅರ್ಜಿ ಅಹ್ವಾನಿಸಲಾಗಿದೆ.

ಅರ್ಹ ಸಂಚಾರಿ ಕುರಿಗಾರರು ನಿಗದಿತ ನಮೂನೆಯನ್ನು ಪಡೆದು ವಲಸೆ ಹೋಗುವುದಕ್ಕೆ ಸಂಬಂದಪಟ್ಟ ಸ್ಥಳೀಯ ಗ್ರಾಮ ಲೆಕ್ಕಾಧಿಕಾರಿಗಳಿಂದ ಮಹಜರ ಪ್ರಮಾಣ ಪತ್ರ ಪಡೆದು, ಸೂಕ್ತ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಪಶು ಚಿಕಿತ್ಸಾಲಯ ಹಾಗೂ ಮುಖ್ಯ ಪಶು ವೈದ್ಯಾಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಬಹುದು ಎಂದು ಬೆಳಗಾವಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವ್ಯಕ್ತಿಗೆ ಬೆಲೆ ಕೊಡುವುದಕ್ಕಿಂತ ಅವನಲ್ಲಿರುವ ವ್ಯಕ್ತಿತ್ವಕ್ಕೆ ಬೆಲೆ ಕೊಡಬೇಕು: ವೀರಣ್ಣ ಒಡ್ಡೀನ



**ಧಾರವಾಡ :** ನಮಗೆ ವ್ಯಕ್ತಿ ಮುಖ್ಯವಲ್ಲ, ವ್ಯಕ್ತಿತ್ವ ಮುಖ್ಯ. ವ್ಯಕ್ತಿಗೆ ಬೆಲೆ ಕೊಡುವುದಕ್ಕಿಂತ ಅವನಲ್ಲಿರುವ ವ್ಯಕ್ತಿತ್ವಕ್ಕೆ ಬೆಲೆ ಕೊಡಬೇಕು ಕ.ವಿ.ವ. ಸಂಘದಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಹೇಳಿದರು.

ಅವರು ಕ.ವಿ.ವ. ಸಂಘದ ಮಕ್ಕಳ ಮಂಟಪವು, ಕರಡಿಗುಡ್ಡದ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದಉಪನ್ಯಾಸಕಾರ್ಯಕ್ರವ 'ದಲ್ಲಿ 'ವಿದ್ಯಾರ್ಥಿಗಳು ಮತ್ತು ವ್ಯಕ್ತಿತ್ವ ವಿಕಸನ' ಕುರಿತು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದಅವರು, ವಿದ್ಯಾರ್ಥಿಜೀವನದಲ್ಲಿ ವ್ಯಕ್ತಿತ್ವವು ನಿಮ್ಮ ಒಳ್ಳೆಯ ಭವಿಷ್ಯ ನಿರ್ಮಿಸುತ್ತದೆ.ಶಾಲಾ ಹಂತದಲ್ಲಿ ಧನಾತ್ಮಕ ಚಿಂತನೆ ಆತ್ಮ ವಿಶ್ವಾಸ, ಪ್ರಾಮಾಣಿಕತೆ ಹಿತಮಿತವಾದ ಮಾತುಗಾರಿಕೆ ತಾಳ್ಮೆಯ ಜೀವನ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ನಿಮ್ಮ ಬದುಕು ಸುಂದರವಾಗುತ್ತದೆ.ಅಂತಹ ಬದು–ಕೇ ಸಾರ್ಥಕ ಬದುಕು, ಜೀವನದಲ್ಲಿ ಬದುಕಿನಅವಧಿ ಮುಖ್ಯವಾಗಬಾರದು. ಹೇಗೆ ಬದುಕಿದೆವುಎಂಬುದು ಮುಖ್ಯ. ವಿದ್ಯಾರ್ಥಿಗಳು ಮಾನವೀಯತೆಯ ಹಸನಾದ ಬದುಕು ಸಾಗಿಸಬೇಕೆಂದರು.

ಕ.ವಿ.ವ. ಸಂಘದ ಮಕ್ಕಳ ಮಂಟಪದ ಸಂಚಾಲಕ ಪ್ರೊ.ಧನವಂತ ಹಾಜವಗೋಳ ಮಾತನಾಡಿ, ನಿಮ್ಮ ವ್ಯಕ್ತಿತ್ವ ವಿಕಾಸಕ್ಕೆ ಭಾಷೆಯೂ ಮುಖ್ಯ. ವಿದ್ಯಾರ್ಥಿಗಳು ಭಾಷಾ ಪ್ರಭುತ್ವ ಹೊಂದಿದರೆ ನಿಮ್ಮ ವ್ಯಕ್ತಿತ್ವಕ್ಕೆ ಮೆರಗು ಬರುತ್ತದೆ.ಬದುಕು ಸುಂದರವಾಗುತ್ತದೆ. ವಿದ್ಯಾರ್ಥಿಗಳಿಗೆ ಭಾಷೆ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವ ಕೌಶಲ ಉತ್ತಮ ಪಡಿಸಿಕೊಳ್ಳಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಪ್ರೊ.ನಂದೀಶ ಕಾ–ಖಂಡಕಿ ಮಾತನಾಡಿ, ವಿದ್ಯಾರ್ಥಿಗಳ ಶಬ್ದ ಬಳಕೆಯ ಮೇಲೆ ಅವರ ವ್ಯಕ್ತಿತ್ವ ರೂಪಗೊಳ್ಳುತ್ತದೆ.ನಿಮ್ಮ ವ್ಯಕ್ತಿತ್ವದಿಂದ ಮಾತ್ರ ಸಮಾಜದಲ್ಲಿ ಒಳ್ಳೆಯ ಗೌರವ ನಿಮಗೆ ಸಿಗುತ್ತದೆ ಎಂದು ಹೇಳಿದರು.

ಕಾಲೇಜಿನ ಸಿ.ಬಿ.ಸಿ. ಉಪಾಧ್ಯಕ್ಷ ಮಹಾಬಳೇಶ್ವರ ಸಂಗಪ್ಪನವರಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ವೇದಿಕೆಯುಲ್ಲಿಉಪನ್ಯಾಸಕ ಮಂಜುನಾಥ ಮುದಕಪ್ಪನವರ, ಪುಷ್ಪಾಐರಸಂಗಇದ್ದರು.

ಪ್ರಕಾಶ ಸೋಜಾ ಸ್ವಾಗತಿಸಿದರು.ಪ್ರಕಾಶ ಸುಣಗಾರ ನಿರೂಪಿಸಿದರು.ಮಾರುತಿ ಪೂಜಾರಿ ವಂದಿಸಿದರು.

# ರೋಗಗಳ ಮುಂಜಾಗ್ರತೆ ಅಗತ್ಯ



**ನವಲಗುಂದ :** 'ಜಾನುವಾರುಗಳಿಗೆ ತಗುಲಬಹುದಾದ ರೋಗಗಳ ಬಗ್ಗೆ ಮುಂಜಾಗ್ರತೆ ವಹಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ಮುಖ್ಯ ಪಶು ವೈದ್ಯಾಧಿಕಾರಿ ಡಾ. ಮನೋಹರ್ ಪಿ ದ್ಯಾಬೇರಿ ಸಲಹೆ ನೀಡಿದರು.

ತಾಲ್ಲೂಕಿನ ಅಳಗವಾಡಿ ಗ್ರಾಮದಲ್ಲಿ ಪಶು ಪಾಲನ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ಹಮ್ಮಿಕೊಂಡಿದ್ದ ಕರುಗಳ ಪ್ರದರ್ಶನ ಹಾಗೂ ಜಾನುವಾರುಗಳ ಅರೋಗ್ಯ ಶಿಬಿರ ಉದ್ದೇಶಿಸಿ ಮಾತನಾಡಿದ ಅವರು 'ಪ್ರಸ್ತುತ ದಿನಗಳಲ್ಲಿ ಹೈನುಗಾರಿಕೆಗೆ ಹೆಚ್ಚು ಒತ್ತು ಸಿಗುತ್ತಿದೆ. ಹಾಲು ಉತ್ಪಾದನೆ,

ಬರಡು ರಾಸುವಿಗೆ ಚಿಕಿತ್ಸೆ ಸೇರಿದಂತೆ ಜಾನುರುಗಳ ಆರೈಕೆ ಬಗ್ಗೆ ರೈತರು ನಿರ್ಲಕ್ಷ್ಯ ತೋರಬಾರದು. ಹತ್ತಿರದ ಪಶು ಆಸ್ಪತ್ರೆಯಲ್ಲಿ ಕಾಲಕಾಲಕ್ಕೆ ಚಿಕಿತ್ಸೆ ಕೊಡಿಸಬೇಕು ಎಂದರು.

ಹಿರಿಯ ಪಶು ವೈದ್ಯಧಿಕಾರಿಗಳಾದ ಡಾ.ಬಸವರಾಜ ಎಚ್ ಮಾತನಾಡಿ ಈ ಪ್ರದರ್ಶನದಲ್ಲಿ 51 ಕರುಗಳು ಭಾಗವಹಿಸಿದ್ದರೆ 29 ಜಾನುವಾರುಗಳ ಅರೋಗ್ಯ ಶಿಬಿರದ ಪ್ರಯೋಜನ ಪಡೆದುಕೊಂಡಿದ್ದು ಸಂತೋಷದ ವಿಷಯ ಉಳಿದ ಜಾನುವಾರುಗಳ ಮಾಲೀಕರು ತಮ್ಮ ಜಾನುವಾರಗಳ ತಪಾಸಣೆ ಮಾಡಿಸಿ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು' ಎಂದರು.

ಹಿರಿಯ ಪಶು ವೈದ್ಯಧಿಕಾರಿಗಳಾದ, ಕರಿಬರಮಣ್ಣವರ, ಪಶು ವೈದ್ಯಧಿಕಾರಿಗಳಾದ ಡಾ.ದರ್ಶನ ಎಂ.ಬಿ, ಜಾನುವಾರು ಅಭಿರುದ್ದಿ ಅಧಿಕಾರಿಗಳಾದ ಸವಣೂರ ಎಚ್ ಸೇರಿ ಇಲಾಖೆ ಸಿಬ್ಬಂದಿ ವರ್ಗ ಗ್ರಾಮ ಪಂಚಾಯತ ಸದಸ್ಯರು ಉಪಸ್ಥಿತರಿದ್ದರು.

# ಶಾಂತಿ ಸುವ್ಯವಸ್ಥೆಗೆ ಪೊಲೀಸ್ ಇಲಾಖೆ ಕಾರ್ಯ ಮಹತ್ವದ್ದು




**ಹುಬ್ಬಳ್ಳಿ :** ಜನರಿಗೆ ಉತ್ತಮ ಸೇವೆ ನೀಡುವ ಇಲಾಖೆ ಪೊಲೀಸ್ ಇಲಾಖೆಯಾಗಿದೆ. ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ನೆಲೆಸುವಲ್ಲಿ ಪೊಲೀಸ್ ಇಲಾಖೆಯ ಕಾರ್ಯ ಮಹತ್ವದ್ದಾಗಿದೆ. ಜನಸ್ನೇಹಿ ಆಡಳಿತ ನೀಡಲು ಪೊಲೀಸ್ ಇಲಾಖೆ ಮುಂದಾಗಬೇಕಿದೆ ಎಂದು ಜಿಲ್ಲಾಧಿಕಾರಿಗಳಾದ ದಿವ್ಯಪ್ರಭು ಜಿ.ಆರ್. ಜೆ. ಹೇಳಿದರು.

ಕಾರವಾರ ರಸ್ತೆಯ ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತಾಲಯದ ಹಳೆಯ ಸಿ.ಎ.ಆರ್. ಮೈದಾನದಲ್ಲಿ ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತಾಲಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಆಧುನಿಕ ತಂತ್ರಜ್ಞಾನದಿಂದ ಪೊಲೀಸ ಇಲಾಖೆಯು ಹಲವಾರು ಸೈಬರ್ ಕ್ರೈಂ ಪ್ರಕರಣಗಳನ್ನು ಇತ್ಯರ್ಥ ಪಡಿಸಿದೆ. ಕತ್ತಿಯ ಜೊತೆಗೆ ಬುದ್ಧಿಯನ್ನು ಉಪಯೋಗಿಸಬೇಕಾಗಿದೆ. ಜನರು ನೆನೆಯುವ ರೀತಿಯಲ್ಲಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಬೇಕು. ಪೊಲೀಸ್ ಠಾಣೆಗೆ ಬರುವ ಸಾರ್ವಜನಿಕರಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸಬೇಕಾಗಿದೆ. ಸಮಾಜದಲ್ಲಿ ಮಾದರಿಯಾಗುವ ನಿಟ್ಟಿನಲ್ಲಿ ಬದುಕು ಸಾಗಿಸಬೇಕು. ಕೆಲಸ ಕಾರ್ಯಗಳನ್ನು ಗೌರವಿಸಬೇಕು. ಸಾರ್ವಜನಿಕರೊಂದಿಗೆ ಬೆರೆತು ಉತ್ತಮ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕಿದೆ. ಎಷ್ಟೋ ಜನರು ಪೊಲೀಸ್ ಇಲಾಖೆಗೆ ಸೇರಬೇಕೆಂದು ಕನಸು ಕಂಡಿರುತ್ತಾರೆ. ಆದರೆ ಕನಸು ನನಸಾಗಿರುವುದಿಲ್ಲ. ಆ ಕೆಲಸ ನಿಮಗೆ ದೊರೆತಿದೆ. ಹೀಗಾಗಿ ಪೊಲೀಸ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೀವುಗಳೇ ಪುಣ್ಯವಂತರು ಎಂದು ತಿಳಿಸಿದರು.

ಹುಬ್ಬಳ್ಳಿ ಧಾರವಾಡ ಮಹಾನಗರ ಪೊಲೀಸ್ ಆಯುಕ್ತರಾದ ಎನ್. ಶಶಿಕುಮಾರ್ ಮಾತನಾಡಿ, ಈ ವರ್ಷ ದೇಶದಲ್ಲಿ 216 ಜನ ಪೊಲೀಸರು ಹುತಾತ್ಮರಾಗಿದ್ದಾರೆ. ಅದರಲ್ಲಿ ಕರ್ನಾಟಕದ 5 ಜನ ಪೊಲೀಸರು ಸೇರಿರುವರು. ಕೆಲವು ವರ್ಷಗಳಿಂದ ಹುತಾತ್ಮರ ಸಂ–ಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ನಕ್ಸಲ್ ದಾಳಿ, ಅಪಘಾತ, ಅನಾರೋಗ್ಯ ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ಪೊಲೀಸರು ಮರಣ ಹೊಂದುತ್ತಿದ್ದಾರೆ. ಪೊಲೀಸ್ ಇಲಾಖೆಯು ವಿಶ್ವಾಸವನ್ನು ಗಳಿಸಿದೆ. ಒಳ್ಳೆಯ ಕೆಲಸ ಕಾರ್ಯಗಳನ್ನು ಇಲಾಖೆಯಡಿ ಮಾಡಲಾಗುತ್ತಿದೆ. ಸಾರ್ವಜನಿಕರು ಸಹ ಪೊಲೀಸ್ ಇಲಾಖೆಯೊಂದಿಗೆ ಉತ್ತಮ ಸಹಕಾರ ನೀಡುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡ ನಗರಗಳನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿಸಲಾಗುವುದು ಎಂದರು.

ಪರೇಡ್ ಕಮ್ಯಾಂಡರ್ ಮಾರುತಿ ಹೆಗಡೆ ನೇತೃತ್ವದ ಪೊಲೀಸ್ ಕವಾಯತು ತಂಡ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ, ಹುತಾತ್ಮರಿಗೆ ಗೌರವ ಸಲ್ಲಿಸಿತು. ಗಣ್ಯರು ಹುತಾತ್ಮರಿಗೆ ಹೂಗುಚ್ಛ ಸಮರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಡಿಸಿಪಿಗಳಾದ ಮಹಾನಿಂಗ ನಂದಗಾವಿ, ರವೀಶ ಸಿ.ಆರ್, ವೈ.ಕೆ. ಕಾಶಪ್ಪನವರ, ಎಸಿಪಿ ಪ್ರಶಾಂತ ಹಿಟ್ಟನಗೌಡರ, ನಿವೃತ್ತ ಡಿಐಜಿ ರವಿಕುಮಾರ್ ನಾಯ್ಕ, ಕಿಮ್ಸ್ ನಿರ್ದೇಶಕರಾದ ಡಾ.ಎಸ್.ಎಫ್. ಕಮ್ಮಾರ, ಸಮಾಜದ ಮುಖಂಡರಾದ ವಿ.ಎಸ್.ವಿ.ಪ್ರಸಾದ್, ಗುರುನಾಥ ಉಳ್ಳಿಕಾಶಿ, ವಿಠ್ಠಲ ಲದ್ವಾ, ಶಿವಾನಂದಪ್ಪ, ಇಂದ್ರವದರ ಓಜಾ, ಟ್ರಾಫಿಕ್ ವಾರ್ಡನ್ ನವೀನ ಕುಲಕರ್ಣಿ, ಛೇಂಬರ್ ಆಫ್ ಕಾಮರ್ಸ್ ನಿರ್ದೇಶಕರಾದ ಶಾಂತರಾಜ ಪೊ?ಳ, ಗೃಹ ರಕ್ಷಕ ದಳದ ಕೃಷ್ಣಾ ಬ್ಯಾಡಗಿ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಕುಟುಂಬಸ್ಥರು, ಸಾರ್ವಜನಿಕರು ಭಾಗವಹಿಸಿದ್ದರು.

# ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೂ ಗುಣಮಟ್ಟದ ಶಿಕ್ಷಣ ದೊರೆಯಲಿ



**ನವಲಗುಂದ :** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಖಾಸಗಿ ಶಾಲೆ ವಿದ್ಯಾರ್ಥಿಗಳಂತೆ ಸರಕಾರಿ ಶಾಲೆ ವಿದ್ಯಾರ್ಥಿಗಳಿಗೂಗುಣಮಟ್ಟದಶಿಕ್ಷಣಹಾಗೂಸೌಲಭ್ಯ ದೊರೆಯಲಿ ಎಂದು ಶಿವಮೊಗ್ಗ ನ್ಯಾಯಾಲಯದ ನ್ಯಾಯಾಧೀಶರಾದ ಮಹಮ್ಮದಅಲಿ ಪೀರಸಾಬ ನಾಯಕ ಹೇಳಿದರು.

ಅವರು ಶಲವಡಿ ಗ್ರಾಮದ ಶ್ರೀ ಗುರುಶಾಂತೇಶ್ವರ ಸರ್ಕಾರಿ ಪ್ರೌಢ ಶಾಲೆಯ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ದತ್ತಿ ನಿಧಿಗೆ 50,000 ರೂಗಳನ್ನು ದೇಣಿಗೆ ನೀಡಿ ಮಾತನಾಡಿದರು

ಪ್ರಧಾನ ಗುರುಗಳಾದ ಎನ್ ವಿ ಕುರವತ್ತಿಮಠ ಮಾತನಾಡಿ ನಮ್ಮ ಶಾಲೆಯ ಹಳೆಯ ವಿದ್ಯಾರ್ಥಿ ಸದ್ಯ ಶಿವಮೊಗ್ಗ ನ್ಯಾಯಾಲಯದ ನ್ಯಾಯಾಧೀಶರಾದ ಮಹಮ್ಮದಅಲಿ ನಾಯಕ ಇವರ ದತ್ತಿ ನಿಧಿಯಿಂದ ಸರಕಾರಿ ಶಾಲೆಗೆ ಬರುವ ಬಡ ಮಕ್ಕಳ ಶಿಕ್ಷಣಕ್ಕೆ ಮತ್ತಷ್ಟು ಅನುಕೂಲವಾಗಲಿದೆ. ಈ ದೇಣಿಗೆ ಹಣವನ್ನು ಶಾಲೆ ಹೆಸರಿನಲ್ಲಿ ಡೆಪಾಸಿಟ್ ಮಾಡಲಾಗುವುದು ಎಂದರು.

.ಈ ವೇಳೆ ಅತಿಥಿ ಶಿಕ್ಷಕರಾದ ಎಸ್ ಎಸ್ ಲಾಂಡೆ, ಎಂ ಎ ಹತ್ತಿ, ಅರಣ್ಯ ಅಧಿಕಾರಿಗಳಾದ ರೆಹಮಾನ ಸಾಬ್ ಪೀರಸಾಬ್ ನದಾಫ್, ಎಸ್ ಡಿ ಎಮ್ ಸಿ ಯ ಕಾರ್ಯಧ್ಯಕ್ಷ ಉಮೇಶ ಶಿರೋಳ ಹಾಗೂ ಪದಾಧಿಕಾರಿಗಳು ಸದಸ್ಯರು, ಶಾಲಾ ನೌಕರರು ಅಭಿನಂದನೆಗಳು ಸಲ್ಲಿಸಿದ್ದಾರೆ.

### ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ: ಪ್ರಗತಿ ಪರಿಶೀಲನಾ ಸಭೆ

# ಗ್ಯಾರಂಟಿ ಯೋಜನೆಗಳನ್ನು ಸಮರ್ಪಕ ಮತ್ತು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಲು ಶ್ರಮವಹಿಸಿ: ರೆಡ್ಡಿ ಶ್ರೀನಿವಾಸ್



**ಕೊಪ್ಪಳ :** ಜನ ಸಾಮಾನ್ಯರ ಏಳಿಗೆಗಾಗಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಮಹತ್ತರವಾದ ಐದು ಗ್ಯಾರಂಟಿ ಯೋಜನೆಗಳನ್ನು ಸಾರ್ವಜನಿಕರಿಗೆ ಸಮರ್ಪಕವಾಗಿ ಪ್ರತಿ ತಿಂಗಳು ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರು ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಅವರು ಹೇಳಿದರು.

ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಎಚ್ ಪಟೇಲ್ ಸಭಾಂಗಣದಲ್ಲಿ ಸೆ. 19ರಂದು ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳು ರಾಜ್ಯ ಸರ್ಕಾರದ ಮಹತ್ವಕಾಂಕ್ಷೆಯಾಗಿರುವ ಸಾಮಾಜಿಕ ಕಾರ್ಯಕ್ರಮವಾಗಿದೆ. ಅರ್ಹರೆಲ್ಲರೂ ಗ್ಯಾರಂಟಿ ಯೋಜನೆಗಳ ವ್ಯಾಪ್ತಿಗೆ ಒಳಪಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿದ್ದು, ಯಾವುದೇ ಅರ್ಹ ಫಲಾನುಭವಿಗಳು ಈ ಯೋಜನೆಯಿಂದ ಹೊರಗುಳಿಯಬಾರದು. ಈ ಹಿನ್ನೆಲೆಯಲ್ಲಿ ಪ್ರಮಾಣಿಕವಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸುವಂತಹ ಕೆಲಸವನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮಾಡಬೇಕು. ಶಕ್ತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಯುವನಿಧಿ ಸೇರಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗುತ್ತಿರುವ ಸಣ್ಣ–ಪುಟ್ಟ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆಗಳನ್ನು ತಲುಪಿಸಬೇಕು ಎಂದು ತಿಳಿಸಿದರು.

ಯೋಜನೆಗಳಿಗೆ ಸಂಬಂಧಪಟ್ಟ ಇಲಾಖೆಯ ಎಲ್ಲಾ ಕಚೇರಿಗಳ ಆವರಣದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ಬ್ಯಾನರ್ ಗಳಲ್ಲಿ ಹಾಕುವುದರ ಮೂಲಕ ಯೋಜನೆಗಳ ಬಗ್ಗೆ ಹೆಚ್ಚಾಗಿ ಪ್ರಚಾರ ಮಾಡಬೇಕು. ಅನ್ನಭಾಗ್ಯ ಯೋಜನೆಗೆ ಸಂಭಂದಿಸಿದಂತೆ ನ್ಯಾಯ ಬೆಲೆ ಅಂಗಡಿಗಳಲ್ಲಿ ಸಿ.ಸಿ ಕ್ಯಾಮರಾಗಳನ್ನು ಅಳವಡಿಸಬೇಕು ಹಾಗೇ ತಿಂಗಳಲ್ಲಿ ರಜೆ ದಿನಗಳನ್ನು ಹೊರತುಪಡಿಸಿ ಎಲ್ಲಾ ದಿನ ಸಾರ್ವಜನಿಕರಿಗೆ ಪಡಿತರವನ್ನು ವಿತರಿಸಬೇಕು. ಗ್ಯಾರಂಟಿ ಯೋಜನೆಗಳ ಸದಸ್ಯರು ಪ್ರತಿ ತಿಂಗಳು ತಾಲ್ಲೂಕುವಾರು ನ್ಯಾಯ ಬೆಲೆ ಅಂಗಡಿಗಳ ಮಾಲೀಕರೊಂದಿಗೆ ಸಭೆ ನೆಡಸಬೇಕು. ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಅಧಿಕಾರಿಗಳಿಗೆ ಅರ್ಹ ಫಲಾನುಭವಿಗಳು ಸಹಕರಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಶಕ್ತಿ ಹಾಗೂ ಅನ್ನಭಾಗ್ಯ ಯೋಜನೆಗಳಲ್ಲಿ ತಿರಸ್ಕೃತವಾದ ಅರ್ಜಿಗಳನ್ನು ತಾಲ್ಲೂಕುವಾರು ಜೊತೆಗೆ ಫಲಾನುಭವಿಗಳ ಹೆಸರು ಸಹಿತ ಮಾಹಿತಿಯನ್ನು ಗ್ಯಾರಂಟಿ ಯೋಜನೆಗಳ ಸದಸ್ಯರಿಗೆ ಕೊಡಬೇಕು. ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಶೇ.100 ರಷ್ಟು ಪ್ರಗತಿ ವರದಿಯನ್ನು ಸಾಧಿಸಬೇಕು ಎಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಗ್ಯಾರಂಟಿ ಯೋಜನೆಗಳಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತಮ್ಮ ಸಿಬ್ಬಂದಿಗಳ ಜೊತೆ ಸಭೆ ನೆಡೆಸಿ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಕಟ್ಟುನಿಟ್ಟಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಗೃಹಲಕ್ಷ್ಮಿ: ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 3,20,440 ಪಡಿತರ ಚೀಟಿಗಳನ್ನು ಹೊಂದಿರುವ ಫಲಾನುಭವಿಗಳಿದ್ದು 3,21,487 ಮನೆ ಯಜಮಾನಿಯರು ಗೃಹಲಕ್ಷ್ಮಿ ಯೋಜನೆಗೆ ನೊಂದಣಿಯಾಗಿದ್ದು, ಆಗಸ್ಟ್–2023 ರಿಂದ ಜುಲೈ –2024 ರವರೆಗೆ ಡಿ.ಬಿ.ಟಿ. ಮೂಲಕ ಒಟ್ಟು ರೂ. 661,88,98,000 ರೂ ಗಳನ್ನು ಪಾವತಿಸಲಾಗಿರುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಗೃಹ ಜ್ಯೋತಿ:

ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 2,73,920 ಫಲಾನುಭವಿಗಳು ಗೃಹ ಜ್ಯೋತಿ ಯೋಜನೆಯಡಿಯಲ್ಲಿ ನೋಂದಣಿಯಾಗಿರುತ್ತಾರೆ.ಸೆಪ್ಟೆಂಬರ್–2024 ರ ಅಂತ್ಯಕ್ಕೆ ಸಬ್ಸಿಡಿ ಮೂಲಕ ಒಟ್ಟು ರೂ. 136.80 ಕೋಟಿ ಗಳನ್ನು ಈ ಯೋಜನೆಗೆ ಪಾವತಿಸಲಾಗಿರುತ್ತದೆ ಎಂದು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಮಾಹಿತಿ ನೀಡಿದರು.

ಯುವನಿಧಿ: ಯುವನಿಧಿ ಯೋಜನೆಯಡಿ ಡಿಸೆಂಬರ್–2023 ರಿಂದ ಆಗಸ್ಟ್–2024 ರವರೆಗೆ ಒಟ್ಟು 11268 ಫಲಾನುಭವಿಗಳಿಗೆ ಡಿ.ಬಿ.ಟಿ. ಮೂಲಕ ಹಣ ಪಾವತಿಸಲಾಗಿರುತ್ತದೆ. ಇದರಲ್ಲಿ 11125 ಪದವಿಧರರಿಗೆ ತಿಂಗಳಿಗೆ ರೂ. 3,000 ರಂತೆ ಹಾಗೂ 143 ಡಿಪ್ಲೋಮ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. 1,500 ರಂತೆ ಒಟ್ಟು 11268 ವಿದ್ಯಾರ್ಥಿಗಳಿಗೆ ಒಟ್ಟು ಮೊತ್ತ ರೂ. 3.35 ಕೋಟಿಗಳನ್ನು ಪಾವತಿಸಲಾಗಿರುತ್ತದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಅಧಿಕಾರಿಗಳು ಮಾಹಿತಿ ನೀಡಿದರು.

ಅನ್ನಭಾಗ್ಯ:

ಅನ್ನಭಾಗ್ಯ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 3,21,994 ಪಡಿತರ ಚೀಟಿಗಳ ಫಲಾನುಭವಿಗಳು ಅರ್ಹರಿದ್ದು, ಇದರಲ್ಲಿ 2,95,703 ಫಲಾನುಭವಿಗಳಿಗೆ ಜುಲೈ–2023 ರಿಂದ ಜುಲೈ–2024 ರವರೆಗೆ ಒಟ್ಟು ರೂ. 224.81 ಕೋಟಿ ಗಳ ವೆಚ್ಚ ಭರಿಸಲಾಗಿರುತ್ತದೆ ಎಂದು ಆಹಾರ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

ಶಕ್ತಿ ಯೋಜನೆ:

ಶಕ್ತಿ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 185.29 ಲಕ್ಷ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯಡಿ ಸೆಪ್ಟೆಂಬರ್ 2024 ರವರೆಗೆ ಉಚಿತವಾಗಿ ಪ್ರಯಾಣಿಸಿದ್ದಾರೆ ಎಂದು ಕಲ್ಯಾಣ ಕರ್ನಾಟಕದ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

ಈ ಸಂಧರ್ಭದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಟಿ ಖಾದ್ರಿ, ಅಮರೇಶ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಸೇರಿದಂತೆ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

# ನಬಾರ್ಡ್‌ನಿಂದ ಅಮ್ಮಾಜೇಶ್ವರಿ ಏತ ನೀರಾವರಿಗೆ 550 ಕೋಟಿ ಮಂಜೂರು



**ಅಥಣಿ :** ಮತಕ್ಷೇತ್ರದ ಪೂರ್ವ ಭಾಗದ ಸಾವಿರಾರು ಎಕರೆ ಭೂಮಿಗೆ ನೀರಾವರಿ ಒದಗಿಸುವ ಅಮ್ಮಾಜೇಶ್ವರಿ–ಕೊಟ್ಟಲಗಿ ಏತ ನೀರಾವರಿ ಯೋಜನೆಯ ವೆಚ್ಚ ಒಟ್ಟು ಸುಮಾರು 1500 ಕೋಟಿ ರೂಗಳು ಈ ಯೋಜನೆಯ ಮೊದಲ ಕಂತು ?900 ಕೋಟಿ ಅನುದಾನ ಪೈಕಿ 550 ಕೋಟಿ ಅನುದಾನವನ್ನು ನಬಾರ್ಡ್ ಬಿಡುಗ–'ಡೆ ಮಾಡಿದೆ. ಉಳಿದ ಅನುದಾನ ರಾಜ್ಯ ನೀರಾವರಿ ಇಲಾಖೆ ಬಿಡುಗಡೆ ಮಾಡಿದೆ. ನಬಾರ್ಡ್ ಅನುದಾನ ಬಿಡುಗಡೆ ಮಾಡಿದ ಆದೇಶ ಪತ್ರವನ್ನು ನೀರಾವರಿ ಇಲಾಖೆಯ ಅಭಿಯಂತರ ಪ್ರವೀಣ ಹುಣಸಿಕಟ್ಟಿ ಹಾಗೂ ಗುತ್ತಿಗೆದಾರ ಶಂಕರ ನಾರಾಯಣ ಕನಸ್ಟ್ರಕ್ಷನ್ ಮುಖ್ಯಸ್ಥ ಸುರೇಶ ಪನ್ನಿಕರ ಶಾಸಕರಿಗೆ ಹಸ್ತಾಂತರಿಸಿ ಪೈಪುಗಳ ಜೋಡಣಾ ಪೂಜಾ ಕಾರ್ಯಕ್ರಮಕ್ಕೆ ಆಮಂತ್ರಣ ನೀಡಿದರು.

ಕಾರ್ಯಕ್ರಮವನ್ನು ಇಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿಯವರು ನೆರವೇರಿಸಲಿದ್ದಾರೆ.

ಈ ವೇಳೆ ಶಾಸಕ ಲಕ್ಷ್ಮಣ ಸವದಿ ಮಾತನಾಡಿ ಸುಮಾರು 1500 ಕೋಟಿ ರೂಗಳ ವೆಚ್ಚದ ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆ ಪೂರ್ವ ಭಾಗದ ರೈತರ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು. ನೂತನ ತಂತ್ರಜ್ಞಾನ ಬಳಸಿಕೊಂಡು ಕೆನಾಲ್ ಬದಲಾಗಿ ಪೈಪ್ ಲೈನ್ ಮೂಲಕ ರೈತರ ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದು

ಇದರಿಂದ ರೈತರ ಭೂಸ್ವಾಧೀನ ತಪ್ಪಲಿದೆ ಜೊತೆಗೆ ಕಾಮಗಾರಿ ಅತಿವೇಗದಲ್ಲಿ ನಡೆಯಲಿದೆ. ಯೋಜನೆಯಿಂದ 19000 ಹೆಕ್ಟೇರ್ ಪ್ರದೇಶ ನೀರಾವರಿ ಆಗುವುದರ ಜೊತೆಗೆ ಒಟ್ಟು 13 ಕೆರೆ ತುಂಬುವ ಯೋಜನೆ ಇದಾಗಿದೆ ಎಂದರು.

ಮತಕ್ಷೇತ್ರದ ಪೂರ್ವ ಭಾಗದ ರೈತರ ಮಹತ್ವಾಕಾಂಕ್ಷೆಯ ಯೋಜನೆಯಾದ ಅಮ್ಮಾಜೇಶ್ವರಿ–ಕೊಟ್ಟಲಗಿ ಏತ ನೀರಾವರಿ ಯೋಜನೆ ಬಹುದಿನಗಳ ಬೇಡಿಕೆ ಆಗಿತ್ತು. ಈ ಯೋಜನೆಗೆ ನಬಾರ್ಡ್ ವಿಶೇಷ ಅನುದಾನ ಬಿಡುಗಡೆ ಮಾಡಿದ್ದು, ಈ ಅನುದಾನ ಪಡೆಯಲು ಹಗಲಿರುಳು ಶ್ರಮಿಸಿದ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಶಾಸಕ ಲಕ್ಷ್ಮಣ ಸವದಿ ಹೃತ್ಪೂರ್ವಕ ಧನ್ಯವಾದ ಸಲ್ಲಿಸುತ್ತೇನೆ ಎಂದರು

ರೈತರ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಮಾಜಿ ಡಿಸಿಎಂ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರ ಸತತವಾಗಿ ಪ್ರಯತ್ನಿಸುತ್ತಿದ್ದಾರೆ ನಾನು ಸಮಸ್ತ ರೈತ ಬಾಂಧವರ ಪರವಾಗಿ ರಾಜ್ಯ ಸರ್ಕಾರ–ಕ್ಕೆ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಮುಖಂಡರಾದ ರಾಮನಗೌಡ ಪಾಟೀಲ್ ಹರ್ಷ ವ್ಯಕ್ತಪಡಿಸಿದರು.



**ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ವಿಪುಲ್ ಬನ್ಸಾಲ್ ಅವರು ಖಾನಾಪುರ ತಾಲ್ಲೂಕಿನ ಗುರ್ಲಗಂಜಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳಿಗೆ ನೀಡಲಾಗುತ್ತಿರುವ ಸೌಲಭ್ಯಗಳನ್ನು ಪರಿಶೀಲಿಸಿದರು. ಪ್ರೊಬೇಷನರಿ ಐ.ಎ.ಎಸ್. ಅಧಿಕಾರಿ ದಿನೇಶ್ ಕುಮಾರ್, ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿ ಗಂಗಾಧರ್ ದಿವಟರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.**

# ಬ್ಯಾಂಡ್ ಕಂಪನಿಗಳ ಸ್ಪರ್ಧೆ



**ಮಹಾಲಿಂಗಪುರ :** ಪಟ್ಟಣದ ಸಾಧುನುಗುಡಿ ರಸ್ತೆಯ ಭಜಂತ್ರಿ ಬಡಾವಣೆಯ ಲಕ್ಷ್ಮೀದೇವಿ ಜಾತ್ರಾ ಮಹೋತ್ಸವ ಅಂಗವಾಗಿ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

100 ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡು ಉಡಿ ತುಂಬಿಸಿಕೊಂಡರು. ನಂತರ ಜಾತ್ರೆ ಅಂಗವಾಗಿ ಆಯೋಜಿಸಿದ್ದ ಬ್ಯಾಂಡ್ ಕಂಪನಿಗಳ ಸ್ಪರ್ಧಾ ಕಾರ್ಯಕ್ರಮ ಮನಸೆಳೆಯಿತು. ಕಲ್ಲೊಳ್ಳಿಯ ಜೈಭಜರಂಗಿ ಬ್ಯಾಂಡ್ ಕಂಪನಿ ಹಾಗೂ ರಬಕವಿಯ ಲಕ್ಷ್ಮೀ ಬ್ಯಾಂಡ್ ಕಂಪನಿ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಬ್ಯಾಂಡ್ ಕಂಪನಿಗಳ ಮಾಲೀಕರಿಗೆ ಡಾಲ್ ವಿತರಿಸುವ ಮೂಲಕ ಎರಡು ದಿನದ ಜಾತ್ರಾ ಮಹೋತ್ಸವ ಸಮಾರೋಪಗೊಂಡಿತು. ಸಮಾಜದ ಮುಖಂಡರು ಭಾಗವಹಿಸಿದ್ದರು.



ಚನ್ನಮ್ಮ ಜಯಂತಿ

**ಮಹಾಲಿಂಗಪುರ :** ಸ್ಥಳೀಯ ಜೆಸಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಆಚರಿಸಲಾಯಿತು.ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ, ಮುಖ್ಯಗುರು ಎಸ್.ಜಿ.ಕೌಜಲಗಿ ಮತ್ತು ಶಿಕ್ಷಕಿಯರು, ಶಿಕ್ಷಕರು ಇದ್ದರು.

# ರನ್ನಬೆಳಗಲಿ: ಚೆನ್ನಮ್ಮಾ ಜಯಂತಿ



**ಮಹಾಲಿಂಗಪುರ :** ರನ್ನಬೆಳಗಲಿ ಸರಕಾರಿ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಕಿತ್ತೂರು ರಾಣಿ ಚೆನ್ನಮ್ಮಾ ಜಯಂತಿ ಆಚರಿಸಲಾಯಿತು.

ಮುಖ್ಯಶಿಕ್ಷಕಿ ಎಸ್.ಎಲ್.ಕಠಾರೆ, ರಾಘವೇಂದ್ರ ನೀಲನ್ನವರ ಮಾತನಾಡಿದರು. ಶ್ರೀಮತಿ ಎಸ್.ಪಿ.ಜೋಶಿ, ಶ್ರೀಮತಿ ಆರ್.ಡಿ.ಬಂಡಿ, ಶ್ರೀಮತಿ ಎಚ್.ಬಿ.ಜಮಾದಾರ, ಶ್ರೀಮತಿ ಎಸ್. ಎಚ್.ಮಾದರ, ರೂಪಾ ದಂಡಿನ ಇದ್ದರು.

# ಚೆನ್ನಮ್ಮಳ ಶೌರ್ಯ, ಸಾಹಸ, ದೇಶಭಕ್ತಿ ಇಂದಿನ ಮಹಿಳೆಯರಿಗೆ ಮಾದರಿ

**ಮಹಾಲಿಂಗಪುರ :** ದೇಶದ ಸ್ವಾತಂತ್ರ್ಯಕ್ಕಾಗಿ ರಣಕಹಳೆ ಮೊಳಗಿಸಿದ ದಿಟ್ಟ ಮಹಿಳೆ, ವೀರವನಿತೆ ಕಿತ್ತೂರ ರಾಣಿ ಚೆನ್ನಮ್ಮಳ ಶೌರ್ಯ, ಸಾಹಸ, ದೇಶಭಕ್ತಿಯು ಇಂದಿನ ಮಹಿಳೆಯರಿಗೆ ಮಾದರಿಯಾಗಲಿ ಎಂದು ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಹೇಳಿದರು.

ಬುಧವಾರ ಪುರಸಭೆಯ ಕಾರ್ಯಾಲಯದಲ್ಲಿ ಜರುಗಿದ ಕಿತ್ತೂರ ರಾಣಿ ಚೆನ್ನಮ್ಮಳ 200ನೇ ಜಯಂತಿ ಆಚರಣೆಯಲ್ಲಿ ಭಾಗವಹಿಸಿ, ಚೆನ್ನಮ್ಮಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು ತನ್ನ ಪರಾಕ್ರಮದಿಂದ



ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ ಮಹಿಳೆ ಚೆನ್ನಮ್ಮ ಭಾರತದ ಇತಿಹಾಸದ ಪುಟಗಳಲ್ಲಿ ಅಗ್ರಗಣ್ಯ ಮಹಿಳೆಯಾಗಿ ಅಜರಾಮರಾಗಿದ್ದಾಳೆ ಎಂದರು. ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ, ಉಪಾಧ್ಯಕ್ಷೆ ಶೀಲಾ ರಾಜೇಶ ಭಾವಿಕಟ್ಟಿ, ಸದಸ್ಯರಾದ ಬಲವಂತಗೌಡ ಪಾಟೀಲ, ಮುಸ್ತಾಕ ಚಿಕ್ಕೋಡಿ, ಬಸವರಾಜ ಯರಗಟ್ಟಿ, ಶೇಖರ ಅಂಗಡಿ, ಅಧಿಕಾರಿಗಳಾದ ಎಸ್.ಎನ್.ಪಾಟೀಲ, ಎಸ್.ಎಂ.ಕಲಬುರ್ಗಿ, ಸಿದ್ದು ಅಳ್ಳಿಮಟ್ಟಿ, ರಾಜು ಹೂಗಾರ, ಮಹಾಲಿಂಗ ಮುಗಳಖೋಡ, ಆರ್.ವೈ.ಸೊನ್ನದ, ಸಿಬ್ಬಂದಿ ಎಂ.ಕೆ.ದಳವಾಯಿ, ರಾಮು ಮಾಂಗ, ಮಹಾಲಿಂಗ ಮಾಂಗ, ಲಕ್ಷ್ಮೀಬಾಯಿ ಪರೀಟ ಹಾಗೂ ಪಂಚಮಸಾಲಿ ಸಮಾಜದ ಹಿರಿಯರು ಇದ್ದರು.

# ಕಿತ್ತೂರ ರಾಣಿ ಚೆನ್ನಮ್ಮ ಜಯಂತಿ

**ಮಹಾಲಿಂಗಪುರ :** ಪಟ್ಟಣದ ಚೆನ್ನಮ್ಮ ವೃತ್ತದಲ್ಲಿ ಪಂಚಮಸಾಲಿ ಸಮಾಜದಿಂದ ಬುಧವಾರ ವೀರರಾಣಿ ಕಿತ್ತೂರ ಚನ್ನಮ್ಮಳ ಜಯಂತಿಯನ್ನು ಆಚರಿಸಲಾಯಿತು. ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಚೆನ್ನಮ್ಮಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ಪುರಸಭೆ ಉಪಾಧ್ಯಕ್ಷೆ ಶೀಲಾ ಭಾವಿಕಟ್ಟಿ, ಮುಖ್ಯಾಧಿಕಾರಿ ಈರಣ್ಣ ದಡ್ಡಿ ಚೆನ್ನಮ್ಮಳ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಪುರಸಭೆ ಸದಸ್ಯರಾದ ಬಸವರಾಜ ಯರಗಟ್ಟಿ, ಶೇಖರ ಅಂಗಡಿ, ಪಂಚಮಸಾಲಿ ಸಮಾಜದ ಮುಖಂಡರಾದ ಮುತ್ತಪ್ಪ ದಲಾಲ, ಶ್ರೀಶೈಲಪ್ಪ ವಜ್ಜರಮಟ್ಟಿ, ಚನ್ನಪ್ಪ ರಾ.ಪಟ್ಟಣಶೆಟ್ಟಿ, ಈರಪ್ಪ ದಿನ್ನಿಮನಿ, ಆನಂದ ಖೋತ, ಚಂದ್ರಶೇಖರ ಅಷ್ಟಗಿ, ವಿಜಯಕುಮಾರ ಕುಳಲಿ, ಮಲ್ಲು ದಲಾಲ, ಸಂತೋಷ ಹುದ್ದಾರ, ಶ್ರೀಶೈಲಪ್ಪ ರೊಡ್ಡನ್ನವರ, ಡಾ|ಅಶೋಕ ದಿನ್ನಿಮನಿ, ಬಸವರಾಜ ಕೊಪ್ಪದ, ಬಸವರಾಜ ದಲಾಲ, ಎಂ.ಎ.ಸವಸುದ್ದಿ, ಪ್ರಶಾಂತ ಹುದ್ದಾರ, ಹಣಮಂತ ಯರಗಟ್ಟಿ, ಮಹಾಂತೇಶ ವಜ್ಜರಮಟ್ಟಿ ಸೇರಿದಂತೆ ಹಲವರು ಇದ್ದರು.



# ಬಿ.ಕಾಮ್ ಮತ್ತು ಬಿ.ಎಸ್.ಸಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ

**ಮಹಾಲಿಂಗಪುರ :** ಚೆನ್ನಮ್ಮ ಬ್ರಿಟಿಷರನ್ನು ನಡುಗಿಸಿದ ಮಹಾನ ವೀರ ಮಹಿಳೆ. ಬ್ರಿಟಿಷ ಸರಕಾರದ ದತ್ತು ಪುತ್ರರಿಗೆ ಹಕ್ಕಿಲ್ಲ ಕಾಯಿದೆಯನ್ನು ವಿರೋಧಿಸಿ ಬ್ರಿಟಿಷರೊಂದಿಗೆ ಯುದ್ಧ ಸಾರಿ ತಾಕ್ರೆ ಭಯ ಬೀಳುವಂತೆ ಮಾಡಿದವಳು ಎಂದು ಪ್ರಾಚಾರ್ಯ ಡಾ.ಕೆ.ಎಮ್. ಅವರಾದಿ ಹೇಳಿದರು.

ಪಟ್ಟಣದ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಪದವಿ ಕಾಲೇಜಿನಲ್ಲಿ ಬುಧವಾರ ಬಿ.ಕಾಮ್ ಮತ್ತು ಬಿ.ಎಸ್.ಸಿ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಮತ್ತು ವೀರ ರಾಣಿ ಕಿತ್ತೂರು ಚನ್ನಮ್ಮನ 246ನೇ ಜಯಂತಿ ಹಾಗೂ 200ನೇ ಕಿತ್ತೂರು ಉತ್ಸವ ಕಾರ್ಯಕ್ರಮದ



ಅಧ್ಯಕ್ಷತೆವಹಿಸಿ ಮಾತನಾಡಿದರು. ಕನ್ನಡ ವಿಭಾಗ ಮುಖ್ಯಸ್ಥರಾದ ಡಾ.ಎ.ಎಂ.ನರೋಡೆ ಮಾತನಾಡಿ ಚೆನ್ನಮ್ಮನ ಸ್ಮರಣೆಗಾಗಿ ಭಾರತ ಸರಕಾರ ವಿಶೇಷ ಅಂಚೆಯನ್ನು ಬಿಡುಗಡೆ ಮಾಡಿದೆ. ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್, ಕ್ವೀನ್ ಆಫ್ ಕಿತ್ತೂರು, ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯ, ಸಿನಿಮಾ, ಕವನ, ಗೀತೆ, ಪುಸ್ತಕ ಹೀಗೆ ಹಲವಾರು ವಿಷಯ ವಸ್ತುಗಳ ಅನುಗುಣವಾಗಿ ಚೆನ್ನಮ್ಮನ ಹೆಸರಿನಲ್ಲಿ ನಾಮಕರಣದೊಂದಿಗೆ ಚನ್ನಮ್ಮಳ ಸ್ಮರಣೆ ಮಾಡಲಾಗಿದೆ ಎಂದರು.

ಐಕ್ಯೂಎಸ್‌ಸಿ ಸಂಯೋಜಕಿ ಡಾ.ಸುನಂದಾ ಸೊರಗಾಂವಿ. ಸಿಬ್ಬಂದಿ ಕಾರ್ಯದರ್ಶಿ ಆರ್.ಎಸ್.ಪೂಜಾರಿ, ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಸಿ.ಬಿಜ್ಜರಗಿ. ವಾಣಿಜ್ಯ ವಿಭಾಗದ ಮುಖ್ಯಸ್ಥೆ ಶ್ರೀಮತಿ ರೋಹಿಣಿ ಕಾಕಡೆ,ಎಸ್.ಎಸ್.ಮುಗಳ್ಯಾಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಟಿ.ಡಿ.ಡಂಗಿ ಸ್ವಾಗತಿಸಿದರು. ಶ್ರೀಯಾ ದಿವಾನಜಿ ನಿರೂಪಿಸಿದರು. ಎಂ.ಬಿ.ಧರಿಗೌಡರ ವಂದಿಸಿದರು.

# ಪಂಚ ಗ್ಯಾರಂಟಿ ನಿಲ್ಲುವುದಿಲ್ಲ:ಶಾಸಕ ಜೆ.ಟಿ.ಪಾಟೀಲ

**ಬೀಳಗಿ :** ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಇರುವವರೆಗೆ ಸರಕಾರ ನೀಡಿದ ಪಂಚ ಗ್ಯಾರಂಟಿಗಳು ನಿಲ್ಲುವುದಿಲ್ಲ ಎಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ, ಶಾಸಕ ಜೆ.ಟಿ.ಪಾಟೀಲ ಹೇಳಿದರು.

ಪಟ್ಟಣದ ತಹಶೀಲ್ದಾರ ಕಚೇರಿಯ ಆಡಳಿತ ಭವನದಲ್ಲಿ ತಾಲೂಕಾ ಮಟ್ಟದ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಸಮಿತಿಯ ನೂತನ ಕಚೇರಿಯ ಪೂಜಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಚುನಾವಣೆಯ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಸರಕಾರ ರಾಜ್ಯದ ಜನತೆಗೆ ಕೊಟ್ಟ ಭರವಸೆಯಂತೆ ನಡೆದುಕೊಂಡು ಇಂದು ಮಹಾತ್ವಾಂಕಾಂಕ್ಷೆಯ ಯೋಜನೆಗಳಲ್ಲಿ ಪಂಚ ಗ್ಯಾರಂಟಿಗಳನ್ನು ಸಮರ್ಪಕವಾಗಿ ನೀಡಿ ನಾಡಿನ ಜನತೆಯ ಆರ್ಥಿಕತೆಗೆ ಉಪಯೋಗಕಾರಿಯಾಗಿದೆ. ಸರಕಾರದ ಯೋಜನೆಗಳ ನೈಜ ಫಲಾನುಭವಿಗಳಿಗೆ ದೊರೆಯಬೇಕಾಗಿದೆ. ಇದರಿಂದ ಯಾರು ವಂಚಿತರಾಗಬಾರದು. ಈ ನಿಟ್ಟಿನಲ್ಲಿ ಅಧ್ಯಕ್ಷರನ್ನು ಹಿಡಿದು ಎಲ್ಲ ಸದಸ್ಯರು ತಮಗೆ ನೀಡಿದ ಜವಾಬ್ದಾರಿಯನ್ನು





ಪ್ರಮಾಣಿಕತೆಯಿಂದ ನಿಭಾಸಬೇಕು. ಇದರಿಂದ ಇನ್ನೂ ಹೆಚ್ಚು ಸಂಘಟನೆಗೆ ಬಲ ಬರಲಿದೆ. ಇಲ್ಲಿ ಯಾವುದೇ ಪಕ್ಷಪಾತ ನಡೆಯಕೂಡದು ಎಂದರು. ಬೀಳಗಿ ತಾಲೂಕಿನಲ್ಲಿ ಗೃಹ ಜ್ಯೋತಿಯಲ್ಲಿ 34356 ಕುಟುಂಬದವರು ಪ್ರತಿತಿಂಗಳ 200 ಯುನಿಟ್‌ವರೆಗೆ ಉಚಿತ ವಿದ್ಯುತ್. ಯುವ ನಿಧಿಯಲ್ಲಿ ಡಿಗ್ರಿ ಪದವಿಧರು 659 ಹಾಗೂ ಡಿಪ್ಲೋಮಾ 6 ಪದವಿಧರು. ಸಕ್ರಿಯೋಜನೆಯಲ್ಲಿ ಬೀಳಗಿ ಡಿಪೋ ಬಸ್ಸಿನಲ್ಲಿ ಒಂದು ವರ್ಷದಲ್ಲಿ 1ಕೋಟಿ 8ಲಕ್ಷ ಮಹಿಳೆಯರು, ಅನ್ನಭಾಗ್ಯ ಯೋಜನೆಯಲ್ಲಿ ಬಡವರಿಗೆ ಪ್ರತಿ ತಿಂಗಲ 10ಕೆಜಿ ಅಕ್ಕಿ, ಗೃಹ ಲಕ್ಷ್ಮೀ ಪ್ರತಿ ಮನೆಯೊಡತಿಗೆ 2000 ದಂತೆ 34157 ಫಲಾನುಭವಿಗಳು ಇದರ ಲಾಭವನ್ನು ಪಡೆದುಕೊಂಡಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಯ ಸಮಿತಿ ಜಿಲ್ಲಾಧ್ಯಕ್ಷ ಡಾ.ಸಾಗರ ತೆಕ್ಕೆನ್ನವರ ಮಾತನಾಡಿ, ಜನರಿಗೆ ಹೆಚ್ಚಿನ ಚೈತನ್ಯ ನೀಡಲು ಮತ್ತು ಮಹಿಳೆಯರ ಸಬಲೀಕರಣಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮತ್ತು ಡಿಸಿಎಂ ಶಿವಕುಮಾರ ಜನ ಸಾಮಾನ್ಯರ ಕಲ್ಯಾಣಕ್ಕಾಗಿ ಮಹತ್ವದ ಯೋಜನೆಗಳು ತಂದು ಅವರ ಬಾಳಿಗೆ ಬೆಳಕನ್ನು ಚಲ್ಲಿದ್ದಾರೆ. ಅವರಿಗೆ ಬೆಂಬಲವಾಗಿ ನಿಲ್ಲುವುದು ಮಾನವ ಧರ್ಮವಾಗಿದೆ. ಪ್ರತಿಯೊಬ್ಬರು ಸರಕಾರದ ಯೋಜನೆಗಳು ಸದ್ದಬಳಿಕೆ ಮಾಡಿಕೊಳ್ಳಬೇಕು. ಗೃಹಜ್ಯೋತಿ, ಯುವನಿಧಿ, ಅನ್ನ ಭಾಗ್ಯ ಹಾಗೂ ಶಕ್ತಿ ಯೋಜನೆಯಿಂದ ಎಲ್ಲ ಸಮುದಾಯದ ಜನರಿಗೆ ಇದರಿಂದ ಹೆಚ್ಚು ಅನುಕೂಲವಾಗಿದೆ ಎಂದರು.

ಗ್ಯಾರಂಟಿ ಯೋಜನೆ ತಾಲೂಕಾ ಸಮಿತಿ ಅಧ್ಯಕ್ಷ ಅಣವೀರಯ್ಯ ಪ್ಯಾಟಿಮಠ, ಎಸ್.ಟಿ.ಪಾಟೀಲ, ಮಾಜಿ ಜಿಪಂ ಅಧ್ಯಕ್ಷ ಎಂ.ಎಲ್.ಕೆಂಪಲಿಂಗನ್ನವರ, ತಹಶೀಲ್ದಾರ ವಿನೋದ ಹತ್ತಳ್ಳಿ, ತಾಪಂ ಇಓ ಅಭಯಕುಮಾರ ಮೊರಬ, ಪಪಂ ಮುಖ್ಯಾಧಿಕಾರಿ ದೇವೆಂದ್ರ ಧನಪಾಲ, ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಣಮಂತ ಕಾಖಂಡಕಿ, ಮುಳಗಡೆ ಹೋರಾಟ ಸಮಿತಿ ಅಧ್ಯಕ್ಷ ಅಧೃಶಪ್ಪ ದೇಸಾಯಿ, ಬಿ.ಅರ್.ಸೊನ್ನದ, ಸಿದ್ದು ಗಿರಗಾಂವಿ, ಮಾಜಿ ಪಪಂ ಅಧ್ಯಕ್ಷ ಅನಿಲ ಗಚ್ಚಿನಮನಿ, ಶಿವಾನಂದ ಮಾದರ, ಶ್ರೀಶೈಲ ಅಂಟಿನ, ಹಣಮಂತ ಸೂಳಿಕೇರಿ, ಮುತ್ತಪ್ಪ ಲಮಾಣಿ, ಭೀಮಸಿ ಮೂಖಾಶಿ, ಯಮನಪ್ಪ ರೊಳ್ಳಿ ಇತರರು ಇದ್ದರು.

# ಇನ್ನರ್ ವೀಲ್ ಕ್ಲಬ್ ವತಿಯಿಂದ ಹೃದಯ ಚಿಕಿತ್ಸೆ ತಪಾಸಣಾ ಶಿಬಿರ



**ಕೊಪ್ಪಳ :** ನಗರದ ಸುರಕ್ಷಾ ಆಸ್ಪತ್ರೆಯಲ್ಲಿ ಬುಧವಾರ ಕೊಪ್ಪಳ ಇನ್ನರ್ ವೀಲ್ ಕ್ಲಬ್ ವತಿಯಿಂದ ಉಚಿತ ಹೃದಯ ಚಿಕಿತ್ಸೆ ತಪಾಸಣಾ ಶಿಬಿರ ಜರುಗಿತು. ಸುಮಾರು 30 ಜನರಿಗೆ ಈ ಶಿಬಿರದಲ್ಲಿ ಆರೋಗ್ಯ ತಪಾಸಣೆ ಮಾಡಲಾಯಿತು. ಹೃದಯ ರೋಗ ತಜ್ಞ ಡಾ. ಡಿ. ಚೇತನ್, ಬೆಂಗಳೂರು, ರವರು ತಪಾಸಣೆ ಮತ್ತು ಚಿಕಿತ್ಸೆ ನಡೆಸಿದರು. ಈ ಶಿಬಿರದಲ್ಲಿ ಇಅಲು ಹಾಗೂ ಔಷಧಿಯನ್ನು ಸಹ ಉಚಿತವಾಗಿ ಒದಗಿಸಲಾಯಿತು.

ನಂತರ ಏರ್ಪಡಿಸಿದ ಸರಳ ಸಾಂಕೇತಿಕ ಸಮಾರಂಭದ ಅಧ್ಯಕ್ಷತೆ ವಹಿಸಿ, ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಮಾತನಾಡಿ, "ಆರೋಗ್ಯವೇ ಭಾಗ್ಯ, ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಕಾಲ ಕಾಲಕ್ಕೆ ತಪಾಸಣೆ ಮಾಡಿಸಿ ಯೋಗ್ಯ ಚಿಕಿತ್ಸೆ ಪಡೆದುಕೊಳ್ಳುವುದರ ಮೂಲಕ ಆರೋಗ್ಯವಂತರಾಗಿರಬೇಕು," ಎಂದು ಅವರು ಕರೆ ನೀಡಿದರು.

ಸಮಾರಂಭದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಕಾರ್ಯದರ್ಶಿ ಮೀನಾಕ್ಷಿ ಬಣ್ಣದಬಾವಿ, ಉಪಾಧ್ಯಕ್ಷ ಮಧು ಶೆಟ್ಟರ್, ಖಜಾಂಚಿ ಆಶಾ, ಐಎಸ್‌ಓ ಮಧು ನಿಲೋಗಲ್, ಸಂಪಾದಕಿ ನಾಗವೇಣಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾಕ್ಟರ್ ರಾಧಾ ಕುಲಕರ್ಣಿ, ನೀತಾ ತಂಬ್ರಹಳ್ಳಿ, ಸುಜಾತಾ ಪಟ್ಟಣಶೆಟ್ಟಿ, ಪಾರ್ವತಿ ಪಾಟೀಲ್, ತ್ರಿಶಾಲ ಪಾಟೀಲ್, ಮಾಜಿ ಅಧ್ಯಕ್ಷರಾದ ಶಾರದಾ ದಾದ್ಮಿ, ಸುಧಾ ಶೆಟ್ಟರ್, ಶರಣಮ್ಮ ಪಾಟೀಲ್, ಸದಸ್ಯರಾದ ಹೇಮಾ, ಶೋಭಾ, ಕವಿತಾ ಶೆಟ್ಟರ್, ಪದ್ಮ ವೀರೇಶ್, ತ್ರಿವೇಣಿ ಮತ್ತು ಮಾಲಾ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಯಶಸ್ವಿಯಾದ ಉದ್ಯೋಗ ಮೇಳ

**ಮೂಡಲಗಿ :** ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜು ಹಾಗೂ ಕರಾವಳಿ ಟೀಚರ್ಸ್ ಹೆಲ್ಪ್ ಲೈನ್, ಧಾರವಾಡ ಇವರ ಸಹಯೋಗದಲ್ಲಿ ಮಂಗಳವಾರ ಜರುಗಿದ ಜಿಲ್ಲಾಮಟ್ಟದ ಉದ್ಯೋಗ ಮೇಳ ಯಶಸ್ವಿಯಾಗಿದೆ. ಸುಮಾರು 600ಕ್ಕೂ ಹೆಚ್ಚು ಜನ ಮೇಳದ ಉಪಯೋಗವನ್ನು ಪಡೆದರು.

ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಚೇರಮನ್ನ ಬಸಗೌಡ ಪಾಟೀಲ ಮಾತನಾಡಿ, ನಿರುದ್ಯೋಗಿ ಯುವಕರಿಗೆ ಇದೊಂದು ಸುವರ್ಣ ಅವಕಾಶವಾಗಿದೆ. ಮೇಳದ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು.

ಬೆಳಗಾವಿಯ ಉದ್ಯೋಗ ವಿನಿಮಯ ಕೇಂದ್ರದ ವಿಭಾಗಾಧಿಕಾರಿ ಸಂತೋಷ ನಾವಲಗಿ ಅವರು ಮಾಡನಾಡಿ, ಉದ್ಯೋಗ ಆಕಾಂಕ್ಷಿಗಳು ಯಾವುದೇ



ಕಂಪನಿ ಅಥವಾ ಯಾವುದೇ ಸ್ಥಳದಲ್ಲಿ ಕೆಲಸ ಮಾಡುವ ಮನೋಭಾವವನ್ನು ಹೊಂದಬೇಕು. ಅಂದಾಗ ಮಾತ್ರ ಆರ್ಥಿಕ ಸದೃಢತೆ ಹೊಂದಲು ಸಾಧ್ಯವಾಗುತ್ತದೆ ಎಂದರು. ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಧಾರವಾಡ ಕರಾವಳಿ ಟೀಚರ್ಸ್ ಹೆಲ್ಪ್ ಲೈನ್ ನಿರ್ದೇಶಕ ಪಾಂಡುರಂಗರಾವ್, ಬೆಂಗಳೂರಿನ ಎಕ್ಸಿಸ್, ಐಸಿಐಸಿಐ ಬ್ಯಾಂಕುಗಳ ಮಾನವ ಸಂಪನ್ಮೂಲ ಅಧಿಕಾರಿ ಶಿವಕುಮಾರ ಮಾತನಾಡಿದರು. ಸಮಾರಂಭದಲ್ಲಿ ಟಾಟಾ ಇಲೆಕ್ಟ್ರಿಕಲ್ ಕಂಪನಿಯ ಮಾನವ ಸಂಪನ್ಮೂಲ ಅಧಿಕಾರಿ ಕು. ಅಶ್ವಿನಿ, ಟೋಯೋಟಾ ಕಂಪನಿಯ ಮಾನವ ಸಂಪನ್ಮೂಲ ಅಧಿಕಾರಿ ಬೇಬಿ ಹುಬ್ಬಳ್ಳಿ, ಪುಕೋಕು ಜಪನೀಸ್ ಎಂ.ಎನ್.ಸಿ. ಕಂಪನಿಯ ಎಚ್.ಆರ್. ಸಿದ್ದಪ್ಪ ರೆಂಟೆ, ಸಂಸ್ಥೆಯ ನಿರ್ದೇಶಕರಾದ ಸಾತಪ್ಪ ಖಾನಾಪೂರ, ಎಂ.ಡಿ.ಕುರಬೇಟ, ಕಾಲೇಜಿನ ಉದ್ಯೋಗ ಮಾಹಿತಿ ಕೇಂದ್ರದ ಕಾರ್ಯದರ್ಶಿಗಳಾದ ಪ್ರೊ.ಸಂತೋಷ ಬಂಡಿ, ಆರ್.ಎಸ್.ಪಂಡಿತ ಇನ್ನಿತರರು ಉಪಸ್ಥಿತರಿದ್ದರು.

ಡಾ. ಕೆ.ಎಸ್. ಪರವ್ವಗೋಳ ನಿರೂಪಿಸಿದರು. ಕು. ರಾಧಿಕಾ ಕರೆಪ್ಪಗೋಳ ಪ್ರಾರ್ಥಿಸಿದರು, ಎನ್.ಎಸ್. ಎಸ್. ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ ವಂದಿಸಿದರು.

# ಬಿಎಸ್ಪಿ ಮುಖಂಡ ಮೆಹಬೂಬ್ ಖಾನ್‌ಗೆ ಸನ್ಮಾನ

**ಕೊಪ್ಪಳ :** ನಗರದ ಹಮಾಲರ ಕಾಲೋನಿ ಯಲ್ಲಿ ವೀರಯೋಧ ಅಷ್ಫಾಕ ಉಲ್ಲಾ ಖಾನ್ ರವರ ಜಯಂತಿ ದಿನಾಚರಣೆ ಅಶ್ಫಾಕ್ ಉಲ್ಲಾಖಾನ್ ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆಯ ವತಿಯಿಂದ ಜರುಗಿದ ಸಮಾರಂಭದಲ್ಲಿ ಕೊಪ್ಪಳ ಜಿಲ್ಲಾ ಬಿಎಸ್ಪಿ ಪಕ್ಷದ ಉಸ್ತುವಾರಿ ಯಾಗಿರುವ ಹಾಗೂ ಮುಸ್ಲಿಂ ಸಮಾಜದ ಮುಖಂಡರಾದ ಮಹಬೂಬ್ ಖಾನ್ ರವರಿಗೆ ಸನ್ಮಾನಿಸಲಾಯಿತು,



ಈ ಸಂದರ್ಭದಲ್ಲಿ ಮುಸ್ಲಿಂ ಧರ್ಮ ಗುರು ಮೌಲಾನ ಮುಫ್ತಿ ಮೊಹಮ್ಮದ್ ನಜೀರ್ ಅಹ್ಮದ್ ಖಾದ್ರಿ ತಸ್ಕಿನಿ, ಮೌಲಾನ ಅಬ್ದುಲ್ ಗಫರ್ ಸಾಹೇಬ್ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹಿರಿಯ ಪತ್ರಕರ್ತ ಎಂ ಸಾಧಿಕ್ ಅಲಿ ಸಮಾಜದ ಯುವ ನಾಯಕರಾದ ಇಬ್ರಾಹಿಂ ಪಟೇಲ್ ಹಬೀಬ್ ಖಾನ್ ಆದಿಲ್ ಪಟೇಲ್ ಸಲೀಂ ಮಂಡಲಗಿರಿ ಹುಸೇನ್ ಪೀರ ಮುಜಾವರ್ ಸೇರಿದಂತೆ ಸಂಸ್ಥೆಯ ಮುಖ್ಯಸ್ಥ ಮರ್ದಾ ನ ಅಲಿ ತಹಶೀಲ್ದಾರ್ ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State